ANANTHKUMAR PRATISHTHANA

# ಅನಂತಪಥ

ಪುಟ 2
**ಶ್ರದ್ಧೆಯ ಶಿಲ್ಪ**
ಹುಲ್ಲೇಕೆರೆಯ ಕೇಶವ ದೇವಾಲಯ



ಸಂಪುಟ - 5 | ನವೆಂಬರ್- 2024 | ಸಂಚಿಕೆ - 53

# ಕನ್ನಡಸೇವೆಗೆ ಅನಂತಬದ್ಧ

ಭಾರತೀಯ ಭಾಷೆಗಳ ಸಾಲಿನಲ್ಲಿ ಕನ್ನಡಕ್ಕೆ ಅಗ್ರಗಣ್ಯ ಸ್ಥಾನವನ್ನು ಕಲ್ಪಿಸಲು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದ ಅನಂತಕುಮಾರ್, ಲೋಕಸಭಾ ಸದಸ್ಯರಾಗಿ ಮತ್ತು ಒಂಭತ್ತು ಖಾತೆಗಳ ಮಂತ್ರಿಯಾಗಿ ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿದ್ದರು, 2012ರಲ್ಲಿ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ಭಾಗವಹಿಸಿದ್ದ ಅನಂತಕುಮಾರ್ ಅಧ್ಯಕ್ಷರನ್ನೂ ಪ್ರತಿನಿಧಿಗಳನ್ನೂ ಉದ್ದೇಶಿಸಿ ಮೊದಲ ಮಾತುಗಳನ್ನೂ ಶುಭಾಶಯಗಳನ್ನೂ ಹೇಳಿದುದು ಕನ್ನಡದಲ್ಲಿಯೇ !

ಅನಂತಕುಮಾರರ ಕನ್ನಡಾಭಿಮಾನಕ್ಕೆ ಅವರ ಖಾಸಗಿ ಸಂಗ್ರಹದಲ್ಲಿರುವ ಕನ್ನಡ ಪುಸ್ತಕಗಳೇ ಸಾಕ್ಷಿ. ತಮ್ಮ ಸಂಗ್ರಹದಲ್ಲಿದ್ದ ಎಲ್ಲ ಪುಸ್ತಕಗಳನ್ನೂ ಅವರು ಓದಿದ್ದರು. ಸಾಹಿತ್ಯಕ್ಕೆ ಸಂಬಂಧಿಸಿದ ಸಭೆಗಳಲ್ಲಿ ರಾಜಕೀಯದ ಸೋಂಕೇ ಇಲ್ಲದೆ ಕನ್ನಡ ಸಾಹಿತ್ಯದ ಬಗ್ಗೆಯೇ ನಿರರ್ಗಳವಾಗಿ ಮಾತನಾಡುತ್ತಿದ್ದರು. ಹೋತಾನಂದ ಎಂಬ ಕಾವ್ಯನಾಮದಲ್ಲಿ ಚುಟುಕಗಳನ್ನೂ ಕವನಗಳನ್ನೂ ರಚಿಸುತ್ತಿದ್ದರು ಎಂದು ಅವರ ಸ್ನೇಹಿತರು ನೆನಪಿಸಿಕೊಳ್ಳುತ್ತಾರೆ.

**ಶಾಸ್ತ್ರೀಯ ಕನ್ನಡಕ್ಕೆ ನೆಲೆಯೆಲ್ಲಿ?** ೨೦೦೭ರಲ್ಲಿ ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದ ಶಿಫಾರಸುಗಳನ್ನು ಅನಂತಕುಮಾರ್ ಸ್ವತ: ಸರಕಾರಕ್ಕೆ ತಲುಪಿಸಿದ್ದರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ-ಮಾನ ಸಿಕ್ಕಿದೆಯಾದರೂ ಅದರಿಂದ ಕನ್ನಡಕ್ಕಾದ ಪ್ರಯೋಜನ ಕಡಿಮೆಯೆಂಬುದನ್ನು ಅನಂತಕುಮಾರ್ ಮನಗಂಡಿದ್ದರು

ಶಾಸ್ತ್ರೀಯ ಕನ್ನಡ ಕೇಂದ್ರವನ್ನು ಕೇಂದ್ರ ಸರಕಾರದಿಂದ ಬಿಡಿಸಿ ರಾಜ್ಯ ಸರಕಾರದಡಿಗೆ ತರಬೇಕೆಂದು ಅವರು ಪ್ರಾಮಾಣಿಕವಾಗಿ ಬಯಸಿದ್ದರು. ಈ ಹಿನ್ನೆಲೆಯಲ್ಲಿ ಡಾ. ಹನುಮಂತಯ್ಯನವರ ನೇತೃತ್ವದಲ್ಲಿ ದೆಹಲಿಗೆ ಆಗಮಿಸಿದ ಕರ್ನಾಟಕದ ನಿಯೋಗದ ಸದಸ್ಯರನ್ನು ಅಭಿನಂದಿಸಲು ಅನಂತಕುಮಾರರು ಕರ್ನಾಟಕದ ೧೨ ಜನ ಎಂಪಿಗಳನ್ನು ಸೇರಿಸಿದರು. ನಿಯೋಗದ ಉದ್ದೇಶವನ್ನು ಅವರಿಗೆ ವಿವರಿಸಿ, ಶಾಸ್ತ್ರೀಯ ಕೇಂದ್ರವು ರಾಜ್ಯ ಸರಕಾರದ ಕೈಕೆಳಗೆ ಬರಲು ಎಲ್ಲರೂ ಒಟ್ಟಾಗಿಯೇ ಕೆಲಸ ಮಾಡಬೇಕೆಂದು ವಿನಂತಿಸಿಕೊಂಡರು. ನಂತರ ಸಚಿವೆ ಶ್ರೀಮತಿ ಸ್ಮೃತಿ ಇರಾನಿಯವರ ಬಳಿ ಎಲ್ಲರನ್ನೂ ಕರೆದೊಯ್ದು ನಿಯೋಗದ ಉದ್ದೇಶವನ್ನು ವಿವರಿಸಿದರು. ಶ್ರೀಮತಿ ಸ್ಮೃತಿ ಇರಾನಿಯವರು, "ಶಾಸ್ತ್ರೀಯ ಕೇಂದ್ರ ನಡೆಸಲು ಅಗತ್ಯವಾದ ಸ್ಥಳವನ್ನು ರಾಜ್ಯಸರಕಾರದಿಂದ ಕೊಡಿಸಿದರೆ, ಒಂದು ತಿಂಗಳ ಒಳಗಾಗಿ ಅದನ್ನು ರಾಜ್ಯ ಸರಕಾರಕ್ಕೆ ಒಪ್ಪಿಸುತ್ತೇನೆ" ಅಂದರು. ಆದರೆ ಕರ್ನಾಟಕ ರಾಜ್ಯ ಸರಕಾರವು ಅಂಥದ್ದೊಂದು ಪತ್ರ ಬರೆಯದಿದ್ದುದರಿಂದ ಅದು ಕಾರ್ಯಗತವಾಗಲಿಲ್ಲ. ಮುಂದೆ ಸ್ಮೃತಿ ಇರಾನಿಯವರ ಖಾತೆ ಬದಲಾಯಿತು. ಅನಂತಕುಮಾರ್ ತೀರಿಕೊಂಡರು. ಸಮಸ್ಯೆ ಇನ್ನೂ ಬಗೆಹರಿಯದೆ ಉಳಿದಿದೆ. ಪುಟ 4 ರಲ್ಲಿ ಮುಂದುವರಿದಿದೆ

## ಶಿರಸಿ ಮತ್ತು ಕುಮಟಾಗಳಲ್ಲಿ 'ಪ್ಲೇಟ್ ಬ್ಯಾಂಕ್' ಉದ್ಘಾಟನೆ



ದಿನಾಂಕ 22, ಅಕ್ಟೋಬರ್ 2024 ರಂದು ಶಿರಸಿ ಮತ್ತು ಕುಮಟಾಗಳಲ್ಲಿ "ಪ್ಲೇಟ್ ಬ್ಯಾಂಕ್" ಯೋಜನೆಯನ್ನು ಸಂಸದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಉದ್ಘಾಟಿಸಿದರು. **ವರದಿ: ಪುಟ-10**

# ಅನಂತ ಸ್ಮೃತಿನಡಿಗೆ

ಅದಮ್ಯ ಚೇತನ ಮತ್ತು ಅನಂತಕುಮಾರ ಪ್ರತಿಷ್ಠಾನದ ವತಿಯಿಂದ ನಾಡಿನ ಧೀಮಂತ ಜನನಾಯಕ, ಅದಮ್ಯ ಚೇತನದ ಸಂಸ್ಥಾಪಕರಾದ ಶ್ರೀ ಅನಂತಕುಮಾರ್ ಅವರ 6ನೇ ಪುಣ್ಯಸ್ಮರಣೆಯ ಅಂಗವಾಗಿ "ಅನಂತ ಸ್ಮೃತಿನಡಿಗೆ" ಪಂಜಿನ ಮೆರವಣಿಗೆ ಕಾರ್ಯಕ್ರಮವು 12 ನವೆಂಬರ್ 2024 ರಂದು ಯಶಸ್ವಿಯಾಗಿ ಜರುಗಿತು. ಪಂಜಿನ ಮೆರವಣಿಗೆಯು ಸೌತ್ ಎಂಡ್ ವೃತ್ತದಲ್ಲಿರುವ ಅನಂತ ಪ್ರೇರಣಾ ಕೇಂದ್ರದಿಂದ ಪ್ರಾರಂಭಗೊಂಡ ಮೆರವಣಿಗೆಯು ಅನಂತ ಸ್ಮೃತಿ ವನ - ಲಾಲ್ ಬಾಗ್ ಪಶ್ಚಿಮ ದ್ವಾರ, ಗಾಂಧಿ ಬಜಾರ್, ನಾಗಸಂದ್ರ ವೃತ್ತ, ವಿಜಯಾ ಹೈಸ್ಕೂಲ್ ಮಾರ್ಗವಾಗಿ ಚಲಿಸಿ ಮರಳಿ ಪ್ರೇರಣಾ ಕೇಂದ್ರದಲ್ಲಿ ಕೊನೆಗೊಂಡಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಖ್ಯಾತ ಲೇಖಕ, ಶ್ರೀ ಬಾಬು ಕೃಷ್ಣಮೂರ್ತಿಯವರು ಮಾತನಾಡುತ್ತ ಅನಂತಕುಮಾರರು ದೇಶಕಂಡ ಅಪೂರ್ವ ಸಜ್ಜನ ರಾಜಕಾರಣಿ. ಅವರ ಆದರ್ಶಗಳನ್ನು ಪ್ರತಿಬಿಂಬಿಸುವ ಈ ಸ್ಮೃತಿನಡಿಗೆಯು ಒಂದು ಅರ್ಥಪೂರ್ಣ ಕಾರ್ಯಕ್ರಮ. ಅನಂತಕುಮಾರರ ಧ್ಯೇಯೋದ್ದೇಶ ಹಾಗೂ ಅವರ ಕನಸುಗಳನ್ನು ನನಸಾಗಿಲು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾಡುತ್ತಿರುವ ಪ್ರಯತ್ನಕ್ಕೆ ಸಹಕರಿಸುವುದರ ಮೂಲಕ ದೇಶವನ್ನು ಬಲಿಷ್ಠವಾಗಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟರು ಮಾತನಾಡಿ, ಅನಂತಕುಮಾರರು ಇಂದು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಅವರ ದೇಶಸೇವೆಯ ಕೌಶಲ್ಯಪೂರ್ಣ ಕಾರ್ಯಪದ್ಧತಿ, ಅವರ ಧನಾತ್ಮಕ ವಿಚಾರಗಳು, ಮಾನವೀಯ ಮೌಲ್ಯಗಳ ಪ್ರತಿಪಾದನೆ ಇವೆಲ್ಲವೂ ನಮ್ಮ ನೆನಪಿನಲ್ಲಿ ಸದಾ ಪ್ರಜ್ವಲಿಸುತ್ತಿದ್ದು ಇಂದಿನ ಯುವಕರಿಗೂ ದಾರಿದೀಪವಾಗಿವೆ. ಶ್ರೀಮತಿ ತೇಜಸ್ವಿನಿಯವರು ವ್ರತನಿಷ್ಠೆಯಿಂದ ಈ ಸ್ಮೃತಿನಡಿಗೆಯನ್ನು ಪ್ರತಿವರ್ಷ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.



ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಾಬುಕೃಷ್ಣಮೂರ್ತಿ, ಪ್ರೊ. ಪಿ.ವಿ ಕೃಷ್ಣಭಟ್ಟರು, ಇತರ ಗಣ್ಯರು ಮತ್ತು ಕಾರ್ಯಕರ್ತರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಅರವಿಂದ ಲಿಂಬಾವಳಿ, ಶಾಸಕರಾದ ಸಿ.ಕೆ ರಾಮಮೂರ್ತಿ, ರವಿಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಡಾ. ಸತ್ಯಧ್ಯಾನಾಚಾರ್ ಕಟ್ಟಿ, ಬಿಬಿಎಂಪಿ ಮಾಜಿ ಉಪ ಮಹಾಪೌರರಾದ ಹರೀಶ್, ಸದಾಶಿವ,. ಡಿ.ಎನ್. ರಮೇಶ್, ಗಂಗಭೈರಯ್ಯ, ಬಿಜೆಪಿಯ ರಾಜ್ಯ ಖಜಾಂಚಿ ಸುಬ್ಬಣ್ಣ, ನರೇಶ್ ಕುಮಾರ್, ಬಿಜೆಪಿ ಮುಖಂಡರಾದ ಚಿ. ನಾ. ರಾಮು, ಮಾಜಿ ವಿಧಾನ ಪರಿಷತ್ ಸದಸ್ಯರಾದ ಅ. ದೇವೇಗೌಡ ಮುಂತಾದ ಗಣ್ಯರ ಜೊತೆಗೆ ಬಿಎಂಎಸ್ ಕಾಲೇಜು, ಬಿಎಂಎಸ್‌ಸಿಇ, ಬಿಎನ್‌ಎಮ್‌ಐಟಿ, ಸುರಾನಾ ಕಾಲೇಜು, ರಾಮಕೃಷ್ಣ ಆಶ್ರಮದ ವಿದ್ಯಾರ್ಥಿಗಳು, ಗ್ಲೋಬಲ್ ಅಕಾಡೆಮಿ, ಯುತ್ ಫಾರ್ ಸೇವಾ ಮತ್ತು ಅದಮ್ಯಚೇತನ ಸಂಸ್ಥೆಯ ಸ್ವಯಂಸೇವಾ ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಿದ್ದರು. ◆

# ಹುಲ್ಲೆಕೆರೆಯ ಕೇಶವ ದೇವಾಲಯ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್



ಕ್ರಿ.ಶ. ಹತ್ತರಿಂದ ಹದಿಮೂರನೆಯ ಶತಮಾನದವರೆಗಿನ ಹೊಯ್ಸಳ ರಾಜವಂಶದ ಆಳ್ವಿಕೆಯು ಕನ್ನಡ ನಾಡಿನ ಇತಿಹಾಸದ ಮಹತ್ವದ ಮೈಲುಗಲ್ಲುಗಳಲ್ಲೊಂದು. ರಾಜಕೀಯವನ್ನು ಮೀರಿ ನಾಡಿನ ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಿಗೆ ಹೊಯ್ಸಳ ಅರಸರ ಕೊಡುಗೆ ಅಪಾರ. ವಿಷ್ಣುವರ್ಧನನಿಂದ ಮೊದಲುಗೊಂಡು ಅವನ ಮಕ್ಕಳು ಮೊಮ್ಮಕ್ಕಳ ಕಾಲಕ್ಕೂ ಮುಂದುವರೆದ ಈ ಸಾಧನೆ, ಕರ್ನಾಟಕದ ಚರಿತ್ರೆಯ ಆಕರ್ಷಕ ಅಧ್ಯಾಯವೆನಿಸಿದೆ.

ತಮ್ಮ ಅರಸರಿಂದ ಪ್ರೇರಣೆ ಪಡೆದ ಹೊಯ್ಸಳ ದಂಡನಾಯಕರೂ ಪ್ರಧಾನರೂ ಹಲವು ದೇಗುಲಗಳ ನಿರ್ಮಾಣ, ದತ್ತಿಧರ್ಮಗಳ ಚಟುವಟಿಕೆಯಲ್ಲಿ ತಂತಮ್ಮ ಶಕ್ತ್ಯಾನುಸಾರ ತೊಡಗಿಸಿಕೊಂಡು ಆಯಾ ಕಾಲದ ಸಾಮಾಜಿಕ ಜೀವನಕ್ಕೆ, ಸಾಂಸ್ಕೃತಿಕ ಮೇಲ್ಮೆಗೆ ಹೊಸ ಹುರುಪನ್ನು ತುಂಬಲು ಶ್ರಮಿಸಿದರು. ಇಂಥ ಉತ್ಸಾಹಿ ಮುಖಂಡರಲ್ಲಿ ಕೋರವಂಗಲದ ದೇಗುಲವನ್ನು ಕಟ್ಟಿಸಿದ ಬೂಚಿರಾಜ, ಕಿಕ್ಕೇರಿಯ ಗುಡಿ ನಿರ್ಮಿಸಿದ ಬೊಮ್ಮವ್ವೆ ನಾಗತಿ, ಬಸರಾಳಿನ ದೇವಾಲಯದ ನಿರ್ಮಾತೃ ಹರಿಹರದೇವ ಮೊದಲಾದವರನ್ನು ಹೆಸರಿಸಬಹುದು. ಬೂಚಿರಾಜನೇ ನಿರ್ಮಿಸಿದ ಇನ್ನೊಂದು ಸುಂದರ ದೇಗುಲ ಹಾಸನ ಜಿಲ್ಲೆಯ ಹುಲ್ಲೆಕೆರೆಯಲ್ಲಿದೆ.



ವಿಷ್ಣುವರ್ಧನನ ಮಗ (ಮೊದಲನೆಯ) ನರಸಿಂಹನ (ಕ್ರಿ.ಶ. 1142-1173) ದಂಡನಾಯಕನಾಗಿ ಪ್ರಸಿದ್ಧಿಪಡೆದವನು ಬೂಚಿರಾಜ. ತನ್ನ ಅಧಿಕಾರ ನಿರ್ವಹಣೆಯನ್ನು ಮೆಚ್ಚಿ ರಾಜನು ಕೊಡುಗೆಯಾಗಿತ್ತ ಹುಲ್ಲೆಕೆರೆ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ, ಅಲ್ಲೊಂದು ಕೇಶವ ದೇವಾಲಯವನ್ನು ನಿರ್ಮಿಸಿದ ಬೂಚಿರಾಜನು ಆ ಅಗ್ರಹಾರವನ್ನೂ ದೇಗುಲವನ್ನೂ ವೈದಿಕರ ಸುಪರ್ದಿಗೆ ಒಪ್ಪಿಸಿದ ವಿವರಣೆ ಶಾಸನದಿಂದ ತಿಳಿದುಬರುತ್ತದೆ. ಆಗ ಶ್ರೀಸೋಮನಾಥಪುರವೆಂಬ ಹೆಸರುಪಡೆದಿದ್ದ ಗ್ರಾಮವು ಹುಲ್ಲೆಕೆರೆಯೆಂಬ ಹಳೆಯ ಹೆಸರಿಗೇ ಅಂಟಿಕೊಂಡು ಬಂದಿದೆ. ಹುಲ್ಲೆಕೆರೆ ಗ್ರಾಮ ಇರುವುದು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ. ತಿಪಟೂರಿನ ಕಡೆಯಿಂದ ಹಾಸನದ ರಸ್ತೆಯಲ್ಲಿ ಬಂದರೆ 14 ಕಿ.ಮೀ. ದೂರದ ಚಿಂದನಹಳ್ಳಿ ಗೇಟಿನಿಂದ ಬಲಕ್ಕೆ ಸ್ವಲ್ಪ ದೂರ ಸಾಗಿದರೆ ಹುಲ್ಲೆಕೆರೆ ತಲುಪಬಹುದು. ಇನ್ನೊಂದು ದಿಕ್ಕಿನಲ್ಲಿ ಗಂಡಸಿ ಕ್ರಾಸ್‌ನಿಂದಲೂ ತಿಪಟೂರಿನ ಕಡೆಗೆ ಬರುವ ಇದೇ ರಸ್ತೆಯ ಮೂಲಕ ಬರಲು ಸಾಧ್ಯ. ಹುಲ್ಲೆಕೆರೆಯ ಕೇಶವ ದೇವಾಲಯದ ಕಟ್ಟಡ ಚಿಕ್ಕದಾದರೂ ದೇವಾಲಯವಿಡೀ ಹರವಿಕೊಂಡಿರುವ ಸುಂದರ ಕೆತ್ತನೆಯ



ಕೌಶಲ ಮನಸೆಳೆಯುತ್ತದೆ. ಬಾಗಿಲ ಎರಡು ಬದಿಯಲ್ಲಿರುವ ಆನೆಗಳು, ಪ್ರಾಕಾರ, ಗೋಪುರ, ಶಿಖರದ ಮೇಲಿನ ಕಳಶ, ಕಳಶದ ಒಂದು ಬದಿಯಲ್ಲಿ ಎದ್ದು ಕಾಣುವಂತಿರುವ ಹೊಯ್ಸಳ ಲಾಂಛನ – ಎಲ್ಲವೂ ಆಕರ್ಷಕವಾಗಿವೆ. ಗುಡಿಯ ಬಾಗಿಲ ಬದಿಯಲ್ಲಿ ಕಂಡು ಬರುವ ಶಾಸನವೂ ಅದರ ಮೇಲುಭಾಗದಲ್ಲಿ ಗರುಡ, ಹಸು-ಕರು, ಪರಿವಾರದೊಂದಿಗೆ ಚಿತ್ರಿಸಿರುವ ಕೇಶವನ ಶಿಲ್ಪವೂ ಗಮನಸೆಳೆಯುತ್ತವೆ. ಗುಡಿಯ ಹೊರಗೋಡೆಗಳ ಮೇಲೆ ಕೇಶವ, ಮಾಧವ, ಗೋವಿಂದ ಮೊದಲಾದ ವಿಷ್ಣುವಿನ ಇಪ್ಪತ್ನಾಲ್ಕು ಮೂರ್ತಿರೂಪಗಳನ್ನು ಕಾಣಬಹುದು. ಪ್ರತಿ ವಿಗ್ರಹದ ಕೆಳಗೆ ಆಯಾ ರೂಪದ ಹೆಸರನ್ನೂ ಕೆತ್ತಿರುವುದೊಂದು ವಿಶೇಷ.

ಗೋಪುರದ ಸುತ್ತಲೂ ಅನೇಕ ಮೂರ್ತಿಗಳ ಆಕರ್ಷಕ ಶಿಲ್ಪಗಳಿವೆ. ವಿಮಾನಗೋಪುರದ ಮುಖ್ಯಕೋಷ್ಠಗಳಲ್ಲಿ ನರಸಿಂಹ, ತ್ರಿವಿಕ್ರಮ, ಕಾಳಿಂಗಮರ್ದನ ಕೃಷ್ಣ, ವೇಣುಗೋಪಾಲ ಮೊದಲಾದ ವಿಗ್ರಹಗಳಿವೆ. ಗೋಪುರದ ಹಂತಗಳಲ್ಲಿ ಸಾಲುಸಾಲಾಗಿ ಕುಳಿತ ಯಕ್ಷ ದೇವತೆಯರ ಉಪಕೋಷ್ಠಗಳ ವಿನ್ಯಾಸವೂ ಸೂಕ್ಷ್ಮಕೆತ್ತನೆಯೂ ಶ್ರೇಷ್ಠಮಟ್ಟದ್ದು. ಸುಸ್ಥಿತಿಯಲ್ಲಿರುವ ಕಳಶ ಮತ್ತು ಅದರ ಬದಿಯಲ್ಲಿರಿಸಿದ ಹೊಯ್ಸಳ ಲಾಂಛನವೂ ಸೇರಿ ಇಡೀ ಗೋಪುರವೇ ಹೊಯ್ಸಳ ಶಿಲ್ಪಕಲೆಯ ಅತ್ಯುತ್ತಮ ಮಾದರಿಗಳಲ್ಲೊಂದಾಗಿ ಕಂಡುಬರುತ್ತದೆ. ಗುಡಿಯ ಮೇಲುಸಾಲಿನ ಕಟಾಂಜನದಲ್ಲಿರುವ ಕೆತ್ತನೆಗಳ ನಡುವೆ ಒಂದು ಬದಿಯಲ್ಲಿ ಗರುಡ, ಮತ್ತೊಂದೆಡೆ ನಂದಿಯಿರುವ ಹರಿಹರ ವಿಗ್ರಹವೂ ಇರುವುದೊಂದು ವಿಶೇಷ.

ದೇವಾಲಯದ ಗರ್ಭಗುಡಿಯಲ್ಲಿ ಕೇಶವನ ಮೂರ್ತಿಯಿದೆ. ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿದ ಸುಂದರವಾದ ಶಿಲ್ಪ. ಗುಡಿಯ ನಡುವಿನ ನವರಂಗದಲ್ಲಿ ನಿಂತು ತಲೆಯೆತ್ತಿದರೆ ಕಾಣುವ ಭುವನೇಶ್ವರಿ (ಒಳಛಾವಣಿ) ಯಲ್ಲಿ ಕಾಳಿಂಗಮರ್ದನನ ರೂಪವನ್ನೂ ಅದರ ಹೊರಚೌಕಟ್ಟಿನಲ್ಲಿ ನೃತ್ಯಸಂಗೀತಗಾರರನ್ನೂ ಕೆತ್ತಿರುವ ಪರಿ ಮನೋಹರವಾದುದು.

ಹುಲ್ಲೆಕೆರೆಯ ಕೇಶವ ದೇವಾಲಯದಂತಹ ನಿರ್ಮಿತಿಗಳು ನೂರಾರು ವರ್ಷಗಳ ಅವಧಿಯಲ್ಲಿ ಹವಾಮಾನದ ವೈಪರೀತ್ಯಗಳನ್ನು ತಾಳಿಕೊಂಡು ವರ್ತಮಾನದವರೆಗೆ ಉಳಿದುಕೊಂಡು ಬಂದಿರುವುದೇ ಸುದೈವವೆನ್ನಬೇಕು. ಸರಕಾರದ ನೆರವಿನಿಂದ ಜೀರ್ಣೋದ್ಧಾರಗೊಂಡು ಮರಳಿ ಎಲ್ಲರ ಗಮನ ಸೆಳೆಯುವಂತಾಗಿರುವ ಈ ಪ್ರಾಚೀನ ಆಸ್ತಿಯನ್ನು ಮುಂದಿನ ಪೀಳಿಗೆಗಳಿಗಾಗಿ ಸುರಕ್ಷಿತವಾಗಿ ಉಳಿಸುವುದು ಅಗತ್ಯ. **(ಸೌಜನ್ಯ: ಆಕಾಶವಾಣಿ, ಮೈಸೂರು)** ◆



# ಅನಂತಯಾನ

ಅಧ್ಯಾಯ-28

# ಅಂಧೇರೇ ಮೇ ಏಕ್ ಪ್ರಕಾಶ್'

ನಿರೂಪಣೆ : ಟಿ.ಎಸ್. ಗೋಪಾಲ್

ಲೋಕನಾಯಕ ಜಯಪ್ರಕಾಶ್ ನಾರಾಯಣರ ಹೆಸರು 1970ರ ದಶಕದಲ್ಲಿ ಮನೆಮಾತಾಗಿತ್ತು. ಅಂದಿನ ದಿನಗಳಲ್ಲಿ ಜೆಪಿ ಎಂಬೆರಡೇ ಅಕ್ಷರಗಳು ಭಾರತೀಯರಲ್ಲಿ ರಾಷ್ಟ್ರಪ್ರೇಮವನ್ನು ಹೊಮ್ಮಿಸಲು ಸಮರ್ಥವಾಗಿದ್ದವು. ತಮ್ಮ ಎಪ್ಪತ್ತೇಳು ವರುಷಗಳ (1902-1979) ಜೀವನವನ್ನು ಭಾರತೀಯ ಸಮಾಜದ ಹಿತಕ್ಕಾಗಿಯೇ ಮುಡಿಪಾಗಿಟ್ಟ ಅಸಾಧಾರಣ ನಿಷ್ಠಾವಂತ ನಾಯಕ. 'ಅಂಧೇರೇ ಮೇ ಏಕ್ ಪ್ರಕಾಶ್- ಜಯಪ್ರಕಾಶ್ ಜಯಪ್ರಕಾಶ್' ಎಂದು ಕೋಟ್ಯಂತರ ಭಾರತೀಯರು ವಿಶ್ವಾಸದುಂಬಿ ಹಾಡಿದ ಕೀರ್ತಿವೆತ್ತ ಧುರೀಣ.



ಸ್ವಾತಂತ್ರ್ಯಪೂರ್ವ ಭಾರತದ ಬಿಹಾರ್ ಪ್ರಾಂತ್ಯದ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ಜಯಪ್ರಕಾಶ್, ಅಮೆರಿಕಾದಲ್ಲಿ ಸಮಾಜಶಾಸ್ತ್ರದ ಶಿಕ್ಷಣಪಡೆದು ಉನ್ನತ ಪದವಿ ಗಳಿಸಿದರು. ಭಾರತಕ್ಕೆ ಹಿಂತಿರುಗಿ ಉದ್ಯೋಗ ಹುಡುಕುವುದಕ್ಕೆ ಬದಲಾಗಿ, ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅಂದಿನ ದಿನಗಳಲ್ಲಿ ಸಮಾಜವಾದದ ಕ್ರಾಂತಿಕಾರಿ ಧೋರಣೆಗಳತ್ತ ಒಲವು ಬೆಳೆಸಿಕೊಂಡಿದ್ದರು. ತನ್ನನ್ನು ಸೆರೆಹಿಡಿದ ಬ್ರಿಟಿಷರ ಬಂಧನದಿಂದ ತಪ್ಪಿಸಿಕೊಳ್ಳುವ ಚಾಣಾಕ್ಷತನವೂ ಅವರಲ್ಲಿತ್ತು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಜಯಪ್ರಕಾಶರು ಗಾಂಧೀವಾದದ ಕಡೆಗೆ ಆಕರ್ಷಿತರಾದರು. ದೇಶದ ಸಮಸ್ಯೆಗಳಿಗೆ ಗ್ರಾಮೋದ್ಧಾರವೇ ಪರಿಹಾರವೆಂದು ತಿಳಿದು ವಿನೋಬಾ ಭಾವೆಯವರೊಡನೆ ಸರ್ವೋದಯ ಕಾರ್ಯಕ್ರಮಗಳನ್ನು ಸಂಘಟಿಸತೊಡಗಿದರು. ಗಿರಿಜಾ ಶಾಸ್ತ್ರಿಯವರಂತಹ ಗೃಹಿಣಿಯರು ಹುಬ್ಬಳ್ಳಿಯ ಭಾಗದಲ್ಲಿ ಸಮಾಜಸೇವೆಯಲ್ಲಿ ತೊಡಗುವುದಕ್ಕೆ ವಿನೋಬಾ ಹಾಗೂ ಜಯಪ್ರಕಾಶ ನಾರಾಯಣರ ಪ್ರಭಾವವೇ ಮುಖ್ಯ ಕಾರಣ.

ಜಯಪ್ರಕಾಶರ ಅಹಿಂಸಾತ್ಮಕ ಉದಾತ್ತ ನಿಲುವು ನಾಗಾ ಬಂಡುಕೋರರ ಮನಸ್ಸನ್ನು ಬದಲಿಸಲು ಸಮರ್ಥವಾಯಿತು; ಚಂಬಲ್ ಡಕಾಯಿತರು ಶಸ್ತ್ರತ್ಯಾಗ ಮಾಡಿ ಸಮಾಜದ ಮುಖ್ಯವಾಹಿನಿಗೆ ಬರಲು ಪ್ರೇರಣೆ ನೀಡಿತು. ಆದರೆ ಬಂಡುಕೋರರು ಇಲ್ಲವೇ, ದರೋಡೆಕೋರರಿಗಿಂತಲೂ ಮಿಗಿಲಾದ ಅಪಾಯವಿದ್ದುದು ಆಗ ದೇಶದ ಆಡಳಿತ ಹೊತ್ತಿದ್ದವರು ಮತ್ತು ಅಧಿಕಾರವರ್ಗದಿಂದಲೇ ಎಂಬುದನ್ನು ಜಯಪ್ರಕಾಶ್ ನಾರಾಯಣರು ಜನತೆಗೆ ತೋರಿಸಿಕೊಟ್ಟರು. ದೇಶದಲ್ಲಿ ತಾಂಡವವಾಡುತ್ತಿದ್ದ ಭ್ರಷ್ಟಾಚಾರ, ಸರ್ವಾಧಿಕಾರಗಳನ್ನು ಎದುರಿಸಲು ಆಂದೋಲನಕ್ಕೆ ಸಜ್ಜಾಗುವಂತೆ ಅವರು ಭಾರತೀಯರಿಗೆ ಕರೆಯಿತ್ತರು.

1974 ರ ಬಿಹಾರ ಆಂದೋಲನ ಈ ಬೃಹತ್ ಚಳುವಳಿಗೆ ನಾಂದಿ ಹಾಡಿತು. ಗುಜರಾತದ ಆಗಿನ ಮುಖ್ಯಮಂತ್ರಿ ಚಿಮಣ್ ಭಾಯಿ ಪಟೇಲ್ ಮತ್ತು ಬಿಹಾರದ ಮುಖ್ಯಮಂತ್ರಿ ಅಬ್ದುಲ್ ಗಫೂರರ ದುರಾಡಳಿತಗಳು ಜನತೆಯನ್ನು ಕೆರಳಿಸಿದ್ದವು. ಇದೇ ಹೊತ್ತಿಗೆ ಅಲಹಾಬಾದಿನ ಉಚ್ಚ ನ್ಯಾಯಾಲಯವು ಆಗಿನ ಪ್ರಧಾನಿ ಇಂದಿರಾಗಾಂಧಿಯವರು ಎಸಗಿರುವ ಚುನಾವಣಾ ಅಕ್ರಮಗಳನ್ನು ಗಮನಿಸಿ, ಅವರು ಚುನಾವಣೆಗಳಲ್ಲಿ ಸ್ಪರ್ಧಿಸಲು ಅನರ್ಹರೆಂದು ಘೋಷಿಸಿತು. ಇವೆಲ್ಲದರ ಹಿನ್ನೆಲೆಯಲ್ಲಿ ಆ ಮುಖ್ಯಮಂತ್ರಿಗಳೂ ಪ್ರಧಾನಿಯೂ ರಾಜೀನಾಮೆ ಕೊಡಬೇಕೆಂದು ಜಯಪ್ರಕಾಶರು ಒತ್ತಾಯಿಸಿದರು. ಸಾಮಾಜಿಕ ಪರಿವರ್ತನೆಯನ್ನು ಉಂಟುಮಾಡಬಲ್ಲ ಸಂಪೂರ್ಣ ಕ್ರಾಂತಿಗಾಗಿ ಅವರು ಕರೆಯಿತ್ತರು. ಸಂಪೂರ್ಣ ಕ್ರಾಂತಿ ಆಂದೋಲನವು ವ್ಯಾಪಕವಾಗಿ ಹರಡುವ ಮುನ್ನವೇ ಪ್ರಧಾನಿ ಇಂದಿರಾ ಗಾಂಧಿ ಜೂನ್ 25, 1975ರಂದು ದೇಶಾದ್ಯಂತ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಜಯಪ್ರಕಾಶ ನಾರಾಯಣರ ಸಮೇತ ಎಲ್ಲ ವಿರೋಧಿ ನಾಯಕರನ್ನೂ ಸೆರೆಮನೆಗಟ್ಟಿದರು. ಜಯಪ್ರಕಾಶ ನಾರಾಯಣರು ಸಂಪೂರ್ಣ ಕ್ರಾಂತಿಗೆ ಕರೆನೀಡುವ ಕಾಲಕ್ಕೆ ಅನಂತಕುಮಾರ ಇನ್ನೂ ಪ್ರೌಢಶಾಲೆಯಲ್ಲಿ ಓದುತ್ತಿದ್ದ.

ತನ್ನ ತಾಯಿ ಸರ್ವೋದಯ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಅವನಿಗೆ ತಿಳಿದಿತ್ತು. ಹೀಗಾಗಿ ವಿನೋಬಾ ಭಾವೆಯವರ ಆಶ್ರಮಕ್ಕೂ ಅವನು ಹೋಗಿ ಬಂದಿದ್ದ. ಜಯಪ್ರಕಾಶ ನಾರಾಯಣರ ಆದರ್ಶ ತನ್ನ ತಾಯಿಯವರ ಸಾಮಾಜಿಕ ಸೇವಾಕಾರ್ಯಗಳಿಗೆ ಸ್ಫೂರ್ತಿಯಾಗಿರುವುದರ ಸ್ಪಷ್ಟ ಅರಿವು ಅನಂತನಿಗಿತ್ತು. ಜಾರ್ಜ್ ಫರ್ನಾಂಡಿಸರಂಥ ಹೋರಾಟಗಾರರೇ ಅವರ ಮನೆಗೆ ಬಂದು ಹೋಗಿದ್ದುಂಟು. ಇದೇ ಅವಧಿಯಲ್ಲಿ ಗಿರಿಜಾ ಶಾಸ್ತ್ರಿಯವರು ಅನಾರೋಗ್ಯದಿಂದ ಬಳಲುವ ಪರಿಸ್ಥಿತಿಯೊದಗಿತು. 1975ರ ಮಾರ್ಚ್ ವೇಳೆಗೆ ಅವರು ಕ್ಯಾನ್ಸರ್ ರೋಗಕ್ಕೆ ತುತ್ತಾದ ವಿಷಯ ತಿಳಿದು, ಶಸ್ತ್ರಚಿಕಿತ್ಸೆಯಾಗಿ, ವೆಲ್ಲೂರಿಗೆ ಹೋಗಿ ನಲವತ್ತು ದಿನಗಳ ಚಿಕಿತ್ಸೆಯನ್ನೂ ಪಡೆದು ಬಂದದ್ದಾಯಿತು. 1975ರ ಏಪ್ರಿಲ್ ತಿಂಗಳಲ್ಲಿ ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅನಂತ ಹುಬ್ಬಳ್ಳಿಯ ಪಿ.ಸಿ. ಜಾಬಿನ್ ಕಾಲೇಜಿನಲ್ಲಿ ವಿಜ್ಞಾನ ವಿಷಯವನ್ನು ಆಯ್ಕೆಮಾಡಿಕೊಂಡು ಪಿ.ಯು.ಸಿ. ಮೊದಲನೇ ವರ್ಷದ ತರಗತಿಗೆ ಪ್ರವೇಶ ಪಡೆದುಕೊಂಡಿದ್ದ. ಇನ್ನೂ ತರಗತಿಗಳು ಆರಂಭವಾಗಿರಲಿಲ್ಲ. ಅಷ್ಟರೊಳಗಾಗಲೇ ಜಯಪ್ರಕಾಶರ ಆಂದೋಲನ ದೇಶಾದ್ಯಂತ ತೀವ್ರಗತಿಯಲ್ಲಿ ನಡೆದಿತ್ತು. ಹುಬ್ಬಳ್ಳಿಯೂ ಅದಕ್ಕೆ ಹೊರತಾಗಿರಲಿಲ್ಲ.

ಹತ್ತನೇ ತರಗತಿ ಪರೀಕ್ಷೆ ಮುಗಿಸಿದ ನಂತರದ ಬೇಸಿಗೆ ರಜೆಯ ದಿನಗಳಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಪ್ರತಿಭಟನಾ ಸಭೆಗಳಲ್ಲಿ ಅನಂತನೂ ಅವನ ಗೆಳೆಯರೂ ಹೋಗಿ ನಿಲ್ಲುತ್ತಿದ್ದರು. ಉಳಿದವರೊಡನೆ ಇವರೂ ಭಾಷಣ ಕೇಳುತ್ತಿದ್ದರು; ಘೋಷಣೆ ಕೂಗುತ್ತಿದ್ದರು. ಆ ದಿನಗಳವರೆಗೂ ಅನಂತಕುಮಾರ ಮತ್ತವನ ಗೆಳೆಯರ ದೇಶಾಭಿಮಾನವು ಸಂಘದ ಶಾಖೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ದೇಶಭಕ್ತರ ಜೀವನಚರಿತ್ರೆಗಳನ್ನು ಓದುವುದು ಹಾಗೂ ಕೇಳುವುದು ಇಂತಹ ಸಾಧಾರಣ ಚಟುವಟಿಕೆಗಳಿಗೆ ಮೀಸಲಾಗಿತ್ತು. ಆದರೂ, ಆಗಿನ ಕಾಲದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳ ಆಯಾಮದ ಬಗೆಗೆ ಅನಂತಕುಮಾರನ ತಿಳುವಳಿಕೆ, ಗ್ರಹಿಕೆಗಳು ಉಳಿದ ಹುಡುಗರಿಗಿಂತ ಹೆಚ್ಚಿನ ಮಟ್ಟದಲ್ಲಿದ್ದುದರಲ್ಲಿ ಸಂದೇಹವಿಲ್ಲ.

ದೇಶದ ಮೇಲೆ ಹೇರಲಾದ ತುರ್ತುಪರಿಸ್ಥಿತಿಯ ಪ್ರಭಾವ ಉಳಿದೆಡೆಗಳಲ್ಲಿ ಹೇಗೂ ಇರಲಿ, ಹುಬ್ಬಳ್ಳಿಯ ಈ ಹುಡುಗರ ದಿನಚರಿಯ ರೂಪರೇಷೆಯನ್ನು ಬದಲಿಸಲು ಸಂದರ್ಭವೊಂದನ್ನು ಒದಗಿಸಿತು. ಸಂಘದ ಚಟುವಟಿಕೆಗಳಲ್ಲಿ ತಾವು ಕಲಿತ ರಾಷ್ಟ್ರೀಯತೆ, ಹಿಂದುತ್ವ ಮತ್ತು ಸದ್ವಿಚಾರದ ಪಾಠಗಳನ್ನು ಇದೀಗ ಪ್ರಾಯೋಗಿಕವಾಗಿ ಅಭ್ಯಸಿಸುವ ಒಂದು ಸುವರ್ಣಾವಕಾಶ ಅನಂತಕುಮಾರನಿಗೂ ಅವನ ಜೊತೆಗಾರರಿಗೂ ಲಭ್ಯವಾಯಿತು. ಹಲವರ ಜೀವನದ ದಿಕ್ಕನ್ನೇ ಬದಲಿಸಿದ ಸನ್ನಿವೇಶವದು. ಬದುಕಿನ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ದೈವದತ್ತವಾದ ಸೋಪಾನವೂ ಆಗಿದ್ದಿತು.

ಆಗ ಶ್ರೀಯುತರಾದ ಪಿ.ಜಿ.ಆರ್. ಸಿಂಧ್ಯ, ಬಿ.ಎಲ್.ಶಂಕರ್, ಉಗ್ರಪ್ಪ ಮೊದಲಾದವರು ಈ ಆಂದೋಲನದ ಮುಂಚೂಣಿಯಲ್ಲಿದ್ದರು. ಹುಬ್ಬಳ್ಳಿಯಲ್ಲಿ ಎಲ್ಲಿ ಮೆರವಣಿಗೆ, ಚಳುವಳಿ, ಸಭೆ ಏರ್ಪಾಡಾದರೆ ಅಲ್ಲಿ ಸಂಘದ ಹುಡುಗರು ಹಾಜರಿರುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯವರು ಕರೆಕೊಟ್ಟಾಗ ಹೇಗೆ ಜನರು ಸೇರುತ್ತಿದ್ದರೋ ಅದೇ ರೀತಿ ಈಗ ಜಯಪ್ರಕಾಶರ ಕರೆಗೆ ಜನರು ಓಗೊಡುತ್ತಿದ್ದರು. ರಾಷ್ಟ್ರೀಯತೆಯ ಅಲೆಗಳು ಅನಂತಕುಮಾರ ಮತ್ತವನ ಗೆಳೆಯರನ್ನು ಸೆಳೆಯತೊಡಗಿದ್ದವು. ಅನಂತಕುಮಾರನ ಬದುಕು, ವ್ಯಕ್ತಿತ್ವಗಳ ವಿಕಸನದಲ್ಲಿ ಇದೊಂದು ಬಹು ಮುಖ್ಯವಾದ ಘಟ್ಟ. ಆತನ ಬೆಳವಣಿಗೆಗೆ ದೊರೆತ ಮಹತ್ವದ ಅವಕಾಶ.

ನಾಯಕತ್ವವನ್ನು ನಿರ್ವಹಿಸಲು ಬೇಕಾದ ಅವಕಾಶವು ಸಂಘರ್ಷದಿಂದ ಮಾತ್ರವೇ ಲಭಿಸುತ್ತದೆ. ನಾಯಕರಾಗಬಲ್ಲವರಿಗೆ ದೊರೆಯುವ ಮೊದಲ ಅವಕಾಶವೇ ಸಂಘರ್ಷ. ರಾಷ್ಟ್ರೀಯ ಮನೋಭಾವದ ಹಿನ್ನೆಲೆ, ರಾಷ್ಟ್ರವನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವ ವಿಶಾಲ ದೃಷ್ಟಿ. ನಿರ್ದಿಷ್ಟ ಗುರಿಸಾಧಿಸುವುದರ ಕಡೆಗೆ ಕೇಂದ್ರಿತವಾದ ಸಾಮಾಜಿಕ ಚಟುವಟಿಕೆ- ಇವೇ ನಾಯಕತ್ವ ನಿರ್ವಹಣೆಗಿರುವ ಮುಖ್ಯಲಕ್ಷಣಗಳು. ಇಂಥ ಸಂದರ್ಭಗಳು ಒದಗಿ ಬಂದಾಗಲೆಲ್ಲ ನಾಯಕತ್ವದ ಸಾಮರ್ಥ್ಯವುಳ್ಳವನು ತನ್ನ ಇರವನ್ನು ಪ್ರಕಟಪಡಿಸುತ್ತಾನೆ, ತನ್ನ ವಿಚಾರಗಳನ್ನು ಸಮರ್ಥವಾಗಿ ಮಂಡಿಸುತ್ತಾನೆ, ನಾಯಕತ್ವಕ್ಕೆ ಒದಗಿದ ಅವಕಾಶವನ್ನು ಬಳಸಿಕೊಂಡು ಕೌಶಲಪೂರ್ಣವಾಗಿ ಮುಂದಡಿಯಿರಿಸುತ್ತಾನೆ.

ತುರ್ತುಪರಿಸ್ಥಿತಿಯ ಅಂದಿನ ಕಾಲವು ಅನಂತಕುಮಾರನಿಗೆ ಈ ಬಗೆಯ ನಾಯಕತ್ವವನ್ನು ರೂಪಿಸಿಕೊಳ್ಳಲು ತಕ್ಕ ಸನ್ನಿವೇಶವನ್ನು ನಿರ್ಮಾಣಮಾಡಿದೆಯೋ ಎನ್ನುವಂತಿತ್ತು. ಆಗಿನ್ನೂ ಪ್ರೌಢಶಾಲೆಯನ್ನು ದಾಟಿಬಂದಿದ್ದ ಅನಂತಕುಮಾರ್ ತನಗೆ ಒದಗಿಬಂದ ಅವಕಾಶವನ್ನು ಎಷ್ಟು ಕೌಶಲಪೂರ್ಣವಾಗಿ ಬಳಸಿಕೊಂಡನೆಂಬುದು ಆತನ ಭವಿಷ್ಯದ ಯಶೋಗಾಥೆಗೆ ನಾಂದಿಯಾಯಿತು. ◆

ಪುಟ 1 ರಿಂದ

# ಕನ್ನಡಸೇವೆಗೆ ಅನಂತಬದ್ಧ

**ಗುರುಗಳಾಗಿ ಬಂದವರು:** ದಿವಂಗತ ಬಿ. ಸೂರ್ಯನಾರಾಯಣ ರಾವ್ ಅವರು ಬರೆದಿದ್ದ, "ಮರೆಯಲಾಗದ ಸಾಮ್ರಾಜ್ಯ - ವಿಜಯನಗರ" ಎಂಬ ಹಂಪಿಯ ಕುರಿತಾದ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಅತಿಥಿಗಳಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಿದ್ದ ಅನಂತಕುಮಾರರ ವಿಚಾರಪ್ರದ ಉಪನ್ಯಾಸವನ್ನು ಕೇಳಿದ ಉಪಕುಲಪತಿ ಡಾ. ಎಂ.ಎಂ. ಕಲ್ಬುರ್ಗಿಯವರು "ಅನಂತಕುಮಾರರು ಈ ಸಮಾರಂಭಕ್ಕೆ ಅತಿಥಿಯಾಗಿ ಬಂದಿಲ್ಲ, ನಮಗೆ ಗುರುಗಳಾಗಿ ಬಂದಿದ್ದಾರೆ" ಎಂದು ಪ್ರಶಂಸೆಯ ಮಾತುಗಳನ್ನು ಆಡಿದ್ದರು. ಅದು ಅನಂತಕುಮಾರರ ಅಧ್ಯಯನಶೀಲತೆಗೆ ದೊರೆತ ಪಂಡಿತಪ್ರಶಂಸೆ.

ಬ್ಯಾಂಕಿಂಗ್ ಸೇವೆಯ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯುವ ಅವಕಾಶ ದೊರೆತಿರುವುದೂ ಅನಂತಕುಮಾರರ ಪ್ರಯತ್ನದಿಂದಲೇ. ಕನ್ನಡದ ಹೆಮ್ಮೆಯ ವಿಜಯಾಬ್ಯಾಂಕಿನ ಕಾರ್ಮಿಕಸಂಘವೊಂದರ ಗೌರವಾಧ್ಯಕ್ಷರಾಗಿದ್ದ ಅವರು ಸಂಘವು ಏರ್ಪಡಿಸಿದ್ದ ಬೃಹತ್ ಸಭೆಯೊಂದರಲ್ಲಿ ಬ್ಯಾಂಕ್ ಅಧಿಕಾರಿಗಳು ಕನ್ನಡದಲ್ಲಿ ವ್ಯವಹರಿಸುವ ಅಗತ್ಯ ಮತ್ತು ಅನಿವಾರ್ಯತೆಗಳನ್ನು ವಿವರಿಸಿ ಬ್ಯಾಂಕಿನ ಹಿರಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕನ್ನಡದ ವಿಷಯಕ್ಕಾಗಿ ದೆಹಲಿಗೆ ಬರುವ ಎಲ್ಲ ನಿಯೋಗಗಳಿಗೂ ಅನಂತಕುಮಾರರೇ ಆತಿಥ್ಯ ನೀಡುತ್ತಿದ್ದರು. ಹೊರನಾಡು ಕನ್ನಡಿಗರು, ಸಾಹಿತ್ಯ ಪರಿಷತ್ತಿನ ಅನುದಾನ, ಸಾಂಸ್ಕೃತಿಕ ಕಟ್ಟಡಗಳಿಗೆ ಅನುದಾನ, ಶಾಸ್ತ್ರೀಯ ಸ್ಥಾನಮಾನ, ಕನ್ನಡ ನೆಲಜಲದ ಸಂರಕ್ಷಣೆ ಮುಂತಾದ ಹತ್ತು ಹಲವು ಬೇಡಿಕೆಗಳನ್ನು ಮುಂದಿರಿಸಿಕೊಂಡು ಬರುವವರಿಗೆ ಅನಂತಕುಮಾರರ ಸಹಾಯಹಸ್ತ ಮುಕ್ತವಾಗಿರುತ್ತಿತ್ತು. ಅರಮನೆ ಮೈದಾನದಲ್ಲಿ ನಡೆದ ವಿಶ್ವ ಕನ್ನಡಿಗರ ಜಾಗೃತಿ ಸಮ್ಮೇಳನಕ್ಕೆ ಸಂಪೂರ್ಣ ಮಾರ್ಗದರ್ಶನ ನೀಡಿದ ಅನಂತಕುಮಾರ್ 42 ದೇಶಗಳ ಕನ್ನಡ ಸಂಘಗಳನ್ನು ಖುದ್ದಾಗಿ ಸಂಪರ್ಕಿಸಿ ಅವರೆಲ್ಲರೂ ಸಮ್ಮೇಳನದಲ್ಲಿ ಭಾಗವಹಿಸುವಂತೆ ಮಾಡಿದ್ದರು. ಕನ್ನಡದ ವಿಷಯದಲ್ಲಿ ಅನಂತಕುಮಾರರ ಸಂಪರ್ಕ ಜಾಲ ಎಷ್ಟು ವಿಶಾಲವಾಗಿತ್ತು ಎಂಬುದನ್ನೂ ಇದು ಸೂಚಿಸುತ್ತದೆ.

**ಕನ್ನಡಕ್ಕಾಗಿ ಕೈನೀಡು:** ಕನ್ನಡದ ಬೆಳವಣಿಗೆಗೆ ಅಗತ್ಯವಿರುವ ತಂತ್ರಜ್ಞಾನದ ವಿಚಾರದಲ್ಲಿ ಅವರು ಆಸ್ಥೆಯನ್ನು ಹೊಂದಿದ್ದರು. ಕನ್ನಡದ ಯೂನಿಕೋಡ್ ನಿರ್ಮಾಣಕ್ಕೆ ಅವರು ಧನ ಸಹಾಯ ಮಾಡಿದ್ದರು. ಪುಸ್ತಕ ಪರಿಷೆಗಳನ್ನು ಏರ್ಪಡಿಸಿ ಸಾವಿರಾರು ಪುಸ್ತಕಗಳನ್ನು ಓದುಗರಿಗೆ ವಿತರಿಸಿದ್ದರು. ಕನ್ನಡ ಶಾಲೆಗಳ ಕಟ್ಟಡ ನಿರ್ಮಾಣ ಮತ್ತು ಶೌಚಾಲಯ ವ್ಯವಸ್ಥೆಗಳಿಗೆ ಸಂಸದರ ನಿಧಿಯಿಂದ ಆದ್ಯತೆಯ ಮೇರೆಗೆ ಅನುದಾನ ನೀಡುತ್ತಿದ್ದರು. ಅದೇ ರೀತಿ, ಕನ್ನಡ ಸಂಸ್ಕೃತಿಯ ಆಧಾರ ಸ್ತಂಭಗಳಾಗಿರುವ ಭಜನಾ ಮಂದಿರಗಳು, ದೇವಾಲಯಗಳು, ಸಮುದಾಯ ಭವನಗಳು, ವಾಚನಾಲಯಗಳು, ಗ್ರಂಥಾಲಯಗಳ ನಿರ್ಮಾಣಕ್ಕೆ ಧಾರಾಳವಾಗಿ ಧನ ಸಹಾಯ ಮಾಡಿ ಪ್ರೋತ್ಸಾಹಿಸಿದ್ದರು. ಕನ್ನಡ ಸಂಸ್ಕೃತಿಯ ಎಲ್ಲ ಪರಿಷೆಗಳಲ್ಲಿ, ಉತ್ಸವಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳ ಮಟ್ಟದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಅವರು ಪ್ರೋತ್ಸಾಹ ನೀಡಿದರು.

ದೇಶದ ರಾಜಧಾನಿ ದೆಹಲಿಯ ಆಯಕಟ್ಟಿನ ಜಾಗದಲ್ಲಿ ತನ್ನದೇ ಆದ ಕಟ್ಟಡ ಹೊಂದಿ, ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮಗಳನ್ನು ನಡೆಸುತ್ತಾ ದೆಹಲಿಯ ಪ್ರತಿಷ್ಠಿತ ಸಂಘಗಳಲ್ಲಿ ಒಂದಾಗಿ ಬೆಳೆದಿರುವ ಕರ್ನಾಟಕ ಸಂಘಕ್ಕೆ ಅನಂತಕುಮಾರ್ ಮಾಡಿದ ಸಹಾಯ ಸ್ಮರಣೀಯವಾದುದು. ಅವರು ಸಂಘದ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ತಮ್ಮ ಮಾತುಗಳಲ್ಲಿ ರಾಜಕೀಯವನ್ನು ಬೆರೆಸದೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ವಿಚಾರವಾಗಿ ಮಾತ್ರ ಮಾತಾಡುವ ಎಚ್ಚರವನ್ನೂ ಪ್ರಬುದ್ಧತೆಯನ್ನೂ ಅವರು ತೋರಿಸಿದ್ದರು. 2015ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ ಅನಂತಕುಮಾರರು ಕನ್ನಡದ ಜ್ಞಾನ ಪ್ರಸಾರಕ್ಕೆ ಡಿಜಿಟೈಸೇಶನ್ ಒಂದೇ ಪರಿಹಾರ ಎಂದೂ ತಿಳಿಸಿದರು. ಅಂದಹಾಗೆ ೨೦೧೨ರಲ್ಲಿ ಸರ್ಕಾರದ ಎಲ್ಲ ಲೇಖನ ವ್ಯವಹಾರಗಳೂ ಯುನಿಕೋಡ್‌ನಲ್ಲೇ ಇರಬೇಕು ಎಂಬ ಅಧಿಕೃತ ಸುತ್ತೋಲೆಯ ಪ್ರಕಟಣೆಯಾಗಲೂ ಅನಂತಕುಮಾರ್ ಅವರೇ ಕಾರಣ.

**ಕನ್ನಡದ ರಾಯಭಾರಿ:** "ಅನಂತಕುಮಾರರ ರಾಜಕಾರಣ ಕೇವಲ ಚುನಾವಣೆಗೆ ಸೀಮಿತವಾಗಿತ್ತು, ರಾಷ್ಟ್ರದ ಅಥವಾ ನಾಡಿನ ಅಭಿವೃದ್ಧಿಯ ವಿಷಯದಲ್ಲಿ ಹಾಗೂ ರೈತರ ಯಾವುದೇ ಸಮಸ್ಯೆಗಳ ನಿವಾರಣೆಗೆ ಅವರು ಕೇಂದ್ರದಲ್ಲಿ ಕರ್ನಾಟಕದ ಪ್ರತಿನಿಧಿಯಂತಿದ್ದರು. ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ ಮತ್ತು ಅದಕ್ಕೆ ಕೆಂಪೇಗೌಡರ ಹೆಸರಿಡುವುದಕ್ಕೂ ಅನಂತಕುಮಾರರೇ ಕಾರಣ. ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಉತ್ಸವಕ್ಕೆ ಸಾವಿರಾರು ಜನರನ್ನು ಕರೆದುಕೊಂಡು ಹೋಗಿ ರಾಷ್ಟ್ರಮಟ್ಟದಲ್ಲಿ ಕೆಂಪೇಗೌಡರನ್ನು ಪರಿಚಯಿಸುವ ಕೆಲಸ ಮಾಡಿದವರಲ್ಲಿ ಅನಂತ್ ಮೊದಲಿಗರು. ಪ್ರಸ್ತಾಪಿಸಲು ಸಾಧ್ಯವಿದ್ದ ಸಂದರ್ಭಗಳಲ್ಲೆಲ್ಲ ಅನಂತಕುಮಾರ ತಮ್ಮ ಭಾಷಣದಲ್ಲಿ ತಮಗೆ ಆದರ್ಶಪ್ರಾಯರಾಗಿದ್ದ ಶಿವಾಜಿಯನ್ನೂ ಕೆಂಪೇಗೌಡರನ್ನೂ ಸ್ಮರಿಸುವುದು ರೂಢಿಯಾಗಿತ್ತು.



**ಬೆಂಗಳೂರಿಗೆ ಕೊಡುಗೆ:** ಕಾವೇರಿ ಜಲ ವಿವಾದ ಮತ್ತು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ವಿಚಾರದಲ್ಲಿ ಬೆಂಗಳೂರಿನಲ್ಲಿ ಮೆಟ್ರೋ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಕರ್ನಾಟಕದಲ್ಲಿ ಸುವರ್ಣ ಚತುಷ್ಪಥ ನಿರ್ಮಾಣಗಳಲ್ಲಿಯೂ ಅವರ ಪಾತ್ರ ಹಿರಿದು. ಕಳಸಾ-ಬಂಡೂರಿ ಯೋಜನೆ ಮತ್ತು ಬೆಂಗಳೂರಿನಲ್ಲಿ ವರ್ತುಲ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿತ ಇಲಾಖೆಗಳಿಂದ ಭೂಮಿಯನ್ನು ಕೊಡಿಸಲು ಅನಂತಕುಮಾರರೇ ಕಾರಣ.

ಬೆಂಗಳೂರಿಗೆ ಕಾವೇರಿ ನೀರು ಸರಬರಾಜಿನ ಎರಡು ಮತ್ತು ಮೂರನೇ ಹಂತ, ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ ಬೆಂಗಳೂರಿನಲ್ಲಿ ಹತ್ತು ಸಾವಿರ ಮನೆಗಳ ನಿರ್ಮಾಣ, ಹೊರವರ್ತುಲ ರಸ್ತೆ, ಉಪನಗರ ರೈಲ್ವೆ, ಬೆಂಗಳೂರಿನ ಸರೋವರಗಳ ಪುನಶ್ಚೇತನ, ನಗರದಲ್ಲಿ ಉತ್ಪಾದನೆಯಾಗುವ ಸಾವಯವ ತ್ಯಾಜ್ಯದಿಂದ ಗೊಬ್ಬರ ತಯಾರಿಕೆ, ಪ್ಲಾಸ್ಟಿಕ್ ಮರುಬಳಕೆ ಘಟಕ - ಮೊದಲಾದವು ಅನಂತಕುಮಾರರು ಸಂಸದರಾಗಿ ಬೆಂಗಳೂರಿಗೆ ನೀಡಿದ ಕೊಡುಗೆಗಳು. ಇವಲ್ಲದೆ ವಿವಿಧೋದ್ದೇಶದ ಸಭಾಂಗಣ, ತಂಗುದಾಣ, ಕ್ರೀಡಾಂಗಣ, ಕೊಳವೆಬಾವಿ, ಸಿಸಿಟಿವಿ ಕಣ್ಗಾವಲು - ಮೊದಲಾದವುಗಳನ್ನು ಒದಗಿಸಲು ಅವರ ಸಂಸದರ ನಿಧಿಯನ್ನು ಬಳಸಲಾಗಿದೆ. ಸಂಸದರ ಆದರ್ಶಗ್ರಾಮ ಯೋಜನೆಯಡಿಯಲ್ಲಿ ಅನಂತಕುಮಾರ್ ಬನ್ನೇರುಘಟ್ಟ ಸಮೀಪದ ರಾಗಿಹಳ್ಳಿಯನ್ನು ದತ್ತುತೆಗೆದುಕೊಂಡು ಗ್ರಾಮಾಂತರ ಪ್ರದೇಶವೊಂದರ ಸುಸ್ಥಿರ ಅಭಿವೃದ್ಧಿಯನ್ನು ಜಾರಿಗೆ ತರುವ ಬಗೆ ಹೇಗೆ ಎಂಬುದನ್ನು ನಿರೂಪಿಸಿದ್ದಾರೆ.

ಧಾರವಾಡದಲ್ಲಿ ಐಐಟಿ ಸ್ಥಾಪನೆ, ಉಡಾನ್ ಯೋಜನೆಯ ನಕ್ಷೆಯಲ್ಲಿ ಉತ್ತರ ಕರ್ನಾಟಕವನ್ನು ಸೇರಿಸಿರುವುದು, ಹುಬ್ಬಳ್ಳಿಯಲ್ಲಿ ಪ್ರತ್ಯೇಕ ರೈಲ್ವೇ ವಲಯ ಸ್ಥಾಪನೆ, ಮುಂತಾದ ಹಲವು ಯೋಜನೆಗಳಿಗೆ ಅನಂತಕುಮಾರರೇ ಕಾರಣ. ಇವೆಲ್ಲ ಪ್ರಯತ್ನಗಳ ಫಲವಾಗಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಹೆಚ್ಚಿದವು.

**ರೈತರ ಹಿತ:** ಕರ್ನಾಟಕದ ವಿಷಯ ಬಂದಾಗ ಅನಂತಕುಮಾರ್ ರಾಜ್ಯದ ಎಲ್ಲ ಸಂಸತ್ಸದಸ್ಯರ ಸಭೆಗಳನ್ನು ಪಕ್ಷಾತೀತವಾಗಿ ಕರೆಯುತ್ತಿದ್ದರು. ಅದಕ್ಕೆ ಸಂಬಂಧಿಸಿದ ಮಂತ್ರಿಗಳೂ ಹಾಜರಿರುವಂತೆ ನೋಡಿಕೊಳ್ಳುತ್ತಿದ್ದರು. ಕೆಲವು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಅಡಿಕೆಗೆ ಸಂಬಂಧಿಸಿದ ಸಮಸ್ಯೆಯೊಂದು ಎದುರಾಗಿದ್ದಾಗ "ಇದು ನನ್ನ ರಾಜ್ಯದ ಸಮಸ್ಯೆ" ಎಂದು ಭಾವಿಸಿ ಕೂಡಲೇ ಕ್ರಮ ತೆಗೆದುಕೊಂಡು ಪರಿಹಾರವನ್ನು ಕಲ್ಪಿಸಲು, ತಿಪಟೂರು ಭಾಗದಲ್ಲಿ ಕೊಬ್ಬರಿಯ ಬೆಲೆ ಕುಸಿತವಾಗಿ ಬೆಳೆಗಾರರು ದುಃಸ್ಥಿತಿಯಲ್ಲಿದ್ದಾಗ ಕೊಬ್ಬರಿಯ ಬೆಂಬಲ ಬೆಲೆಯನ್ನು 6000 ರೂಪಾಯಿಗಳಿಂದ 10000 ರೂಪಾಯಿಗಳಿಗೆ ಹೆಚ್ಚಿಸಲು ಕಾರಣರಾದರು. ಅದೇ ರೀತಿ ಜಿಎಸ್‌ಟಿ ಕಡಿಮೆ ಮಾಡಲೂ ಕೂಡ ರೈತರು ಮಾಡಿಕೊಂಡ ಮನವಿಗಳಿಗೆ ಅವರು ಆ ಕೂಡಲೇ ಸ್ಪಂದಿಸಿದ್ದರು.

ಈ ರೀತಿಯಾಗಿ ರಾಷ್ಟ್ರ ರಾಜಕಾರಣದ ಔನ್ನತ್ಯದಲ್ಲಿದ್ದಾಗಲೂ ತನ್ನ ಬೇರುಗಳನ್ನು ಮರೆಯದೆ ಕನ್ನಡದ ನಾಡು, ನೀರು, ನುಡಿಗಳಿಗಾಗಿ ನಿಷ್ಠೆಯಿಂದ ಪರಿಶ್ರಮಿಸಿದ ಅನಂತಕುಮಾರರು ಕನ್ನಡದ, ಕನ್ನಡ ನಾಡಿನ ಅನರ್ಘ್ಯ ರತ್ನವೆಂದರೆ ತಪ್ಪಾಗಲಾರದು. ◆

# ಅನಂತಕುಮಾರ್ ಅವರೊಂದಿಗಿನ ಮಧುರ ಬಾಂಧವ್ಯ



**ಕಮಲಕ್ಕ**
(ಶ್ರೀ ಪಿ.ವಿ. ಕೃಷ್ಣಭಟ್ ಅವರ ಧರ್ಮಪತ್ನಿ)

ಅನಂತಪಥ ಪತ್ರಿಕೆಯಲ್ಲಿ ದಿವಂಗತ ಅನಂತಕುಮಾರರ ಆತ್ಮೀಯರು, ಕುಟುಂಬದವರು, ಒಡನಾಡಿಗಳು ಬರೆದಿರುವ ಲೇಖನಗಳನ್ನು ಓದಿದಾಗ ನನಗೂ ನಮ್ಮ ಕುಟುಂಬದವರಂತೆ ಇದ್ದ, ಅವರ ಆತ್ಮೀಯತೆ, ಹಾಸ್ಯಸ್ವಭಾವ, ಸಹಾಯದ ಪರಿಸ್ಥಿತಿಯಲ್ಲಿ ನೆರವಾಗಿದ್ದು, ನಮ್ಮ ಬಗ್ಗೆ ಆದರ ಗೌರವ, ಭಕ್ತಿ ಇವುಗಳ ಬಗ್ಗೆ ಬರೆಯಬೇಕು ಅನಿಸಿತು.

ನಮಗೆ ಅನಂತಕುಮಾರರ ಪರಿಚಯವಾಗಿದ್ದು ಸುಮಾರು 1978-79ರ ಸಮಯದಲ್ಲಿ . ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿದ್ದರಿಂದ ನಮ್ಮವರಿಗೆ (ಕೃಷ್ಣಭಟ್ಟರು) ಅವರ ಜೊತೆ ಒಡನಾಟ, ಸಂಪರ್ಕ ಇತ್ತು. ಹುಬ್ಬಳ್ಳಿಯ ಕಾರ್ಯಕರ್ತರು ನಮ್ಮ ಮನೆಗೆ ಬರುತ್ತಿದ್ದರು. ಪೂರ್ಣಾವಧಿ ಕಾರ್ಯಕರ್ತೆ ಗೀತಾ ಬ್ಯಾಹಟ್ಟಿ ನಮ್ಮ ಮನೆಯಲ್ಲೇ ಇದ್ದವರು; ಅಚ್ಯುತ ಲಿಮಯೆ, ವಿಷ್ಣುಕಾಂತ ಚಟಪಲ್ಲಿ ಹೀಗೆ ಅನೇಕರು ಇವರೊಡನೆ ಬಂದು, ನಮ್ಮ ಮನೆಯಲ್ಲಿ ತಂಗಿದ್ದು, ಮುಂದಿನ ಕಾರ್ಯಗಳ ಬಗ್ಗೆ ಬೈಠಕ್ ನಡೆಸುತ್ತಿದ್ದರು. ನಮ್ಮ ಮನೆಯಲ್ಲೇ ಊಟ, ವಾಸ್ತವ್ಯ, ವಿಶ್ರಾಂತಿ.

ಅನಂತಕುಮಾರ್ ಪ್ರವಾಸ ಮಾಡುತ್ತಿದ್ದಾಗ ನಮ್ಮ ಮನೆಗೆ ಬರುತ್ತಿದ್ದರು. ಒಮ್ಮೆ ಇವರೊಡನೆ ಮನೆಗೆ ಬಂದಾಗ ರಾತ್ರಿಯಾಗಿತ್ತು. ಊಟ ಆಗಿರಲಿಲ್ಲ. ಅಡುಗೆ ಮಾಡಿ ಅಡುಗೆ ಮನೆಯಲ್ಲೇ ಊಟ ಬಡಿಸಿದ್ದೆ. ಮಕ್ಕಳು ನಮ್ಮ ಅತ್ತೆ ಎಲ್ಲರೂ ಮಲಗಿದ್ದರು. ಸ್ಥಳಾವಕಾಶವೂ ಇರಲಿಲ್ಲ. ಹೆಚ್ಚಿಗೆ ಸದ್ದು ಮಾಡಬಾರದೆಂದು ಅಡುಗೆ ಮನೆಯಲ್ಲಿಯೇ ಸಿಲಿಂಡರ್ ಪಕ್ಕದಲ್ಲೇ ಊಟ ಮಾಡಿದರು. ನಮ್ಮ ಅತ್ತೆಗೆ ಎಲ್ಲಾ ತಿಳಿದಿತ್ತು. ಬೆಳಗ್ಗೆ ಎದ್ದು ಸ್ನಾನ ಮಾಡಿ ಹೊರಟಾಗ 'ಬರ್ತೀನಿ ಅಜ್ಜಿ' ಎಂದು ನಮ್ಮತ್ತೆಗೆ ಹೇಳಿದರು. "ರಾತ್ರಿ ಅಡುಗೆ ಮನೆಯಲ್ಲಿ ಊಟ ಮಾಡಿದ್ದು ತಿಳಿಯಿತು. ನನಗೋ ಮಡಿ ಮೈಲಿಗೆ ಜಾಸ್ತಿ. ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ್ದಾನೆ, ನನ್ನ ಮಗನಿಗೆ ಜಾತಿಮತ ಏನೂ ಇಲ್ಲ. ಏನೂ ತಿಳಿಯಬೇಡಪ್ಪ, ನನಗೆ ಕಷ್ಟ. ಬಿಡೋಕ್ಕೆ ಆಗೋಲ್ಲ. ನನಗೆ ತೋಚಿದ್ದು ಹೇಳಿದೆ" ಎಂದರು. ಆಗ ಅನಂತಕುಮಾರ್ "ನಾನೂ ಬ್ರಾಹ್ಮಣನೇ. ನನ್ನ ತಂದೆ ಶಾಸ್ತ್ರಿಗಳು. ಪೂಜೆ ಮಡಿ ಎಲ್ಲಾ ಇದೆ" ಎಂದಿದ್ದರು. ನಮ್ಮತ್ತೆ "ನನ್ನ ಮಗನ ಜೊತೆ ಸೇರಿದ ಮೇಲೆ ಜಾತೀಗೀತೀ ಎಲ್ಲಿದೆ? ಸಂಘ ಒಂದೇ ಗೊತ್ತಿರೋದು" ಎಂದಾಗ ಅನಂತರು "ಇಲ್ಲಾ ಅಜ್ಜಿ, ನಮ್ಮ ಅಮ್ಮನೂ ಬೈತಾರೆ, ಮನೆಯಲ್ಲಿ ನೀನು ಏನೂ ಮುಟ್ಟಬೇಡಾ, ನನ್ನನ್ನು ಕೇಳು ಕೊಡ್ತೀನಿ ಅಂತ ನನಗೆ ಏನೂ ಮಾಡಲು ಬಿಡೋಲ್ಲ" ಎಂದು ಹಾಸ್ಯಭರಿತವಾಗಿ ಹೇಳಿ ನಮ್ಮತ್ತೆಗೂ, ತಾನೂ ಬ್ರಾಹ್ಮಣ, ಎಲ್ಲಾ ಗೊತ್ತು ಎಂದು ಸುಮ್ಮನಾಗಿಸಿದ್ದರು. ವಿಶ್ವಾಸದಿಂದ ಮಾತನಾಡಿಸಿದ್ದರಿಂದ ಅವರಿಗೂ ಖುಷಿಯಾಗಿತ್ತು.

ಆಗ ಹೆಚ್ಚಿಗೆ ನಮ್ಮ ಮನೆಗೆ ಬರುತ್ತಿದ್ದ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರನ್ನು ನಮ್ಮ ಮಕ್ಕಳೂ ನೋಡಿದ್ದರು. ಸ್ವಾಭಾವಿಕವಾಗಿಯೇ ಅವರೊಡನೆ ಬೆರೆಯುತ್ತಿದ್ದರು. ಬೆಂಗಳೂರಿಗೆ ಹೋದಾಗ ಒಂದೆರಡು ಬಾರಿ ನಮ್ಮ ತಂದೆ ಮನೆಗೂ ಇವರೊಡನೆ ಅನಂತಕುಮಾರ್ ಹೋಗಿದ್ರಂತೆ. ನಮ್ಮಮ್ಮನ ಕೈ ರುಚಿ ನೋಡಿದ್ದರು. "ನಿಮ್ಮ ತಂದೆ ಮನೆಗೆ ಹೋಗಿದ್ದೆ" ಎಂದು ನಮ್ಮಲ್ಲಿಗೆ ಬಂದಾಗ ತಿಳಿಸುತ್ತಿದ್ದರು. ನಮ್ಮ ತಂದೆ ಕಾಗದ ಬರೆದಾಗ ಹುಬ್ಬಳ್ಳಿಯವರು ಮನೆಗೆ ಬಂದಿದ್ದರು ಅಂತ ತಿಳಿಸುತ್ತಿದ್ದರು. ಪರಿಷತ್ತಿನಲ್ಲೂ ಪ್ರಾಂತ ಕೇಂದ್ರ ಜವಾಬ್ದಾರಿಗಳನ್ನು ನಿಭಾಯಿಸಿ ಸಂಘಟನಾಚಾತುರ್ಯ ಮೆರೆದವರು ಅನಂತಕುಮಾರ್. ನಾನು ಅದರಲ್ಲಿ ಭಾಗಿಯಾಗದಿದ್ದರೂ ಅವರ ವಿಶಾಲ ಧ್ಯೇಯದ ಬಗ್ಗೆ ತಿಳಿದಿತ್ತು. ಹೀಗೆ ಅನೇಕ ಜವಾಬ್ದಾರಿ ಸ್ಥಾನದಿಂದ ಮೇಲೇರಿ ಕೇಂದ್ರ ಮಂತ್ರಿ ಮಂಡಲದಲ್ಲಿ ಮಂತ್ರಿಯಾದಾಗ ನಮಗೂ ಎಲ್ಲರಿಗೂ ಖುಷಿಯಾಗಿತ್ತು. ಮೊದಲ ಬಾರಿ ಕೇಂದ್ರ ಮಂತ್ರಿ ಆಗಿದ್ದಾಗ ಶಿವಮೊಗ್ಗದ ನಮ್ಮ ಮನೆಗೆ ಬಂದಿದ್ದರು. ಅವರು ಬರುವ ಮುಂಚೆ ನಮ್ಮ ಸುತ್ತಮುತ್ತಲಿನ ವಾತಾವರಣವೇ ಬದಲಾಗಿತ್ತು. ಪೋಲಿಸರು ಬಂದು ಅವಲೋಕನ, ಜೊತೆಯಲ್ಲಿ ಗನ್‌ಮೆನ್‌ಗಳು, ಸುತ್ತ ಆಪ್ತಸಲಹೆಗಾರರು, ಬೇಕೋ ಬೇಡವೋ ಅವರ ಜೊತೆ ನಾನೂ ಇದ್ದೀನಿ ಎನ್ನುವ ಪರಾಕು ಮಂದಿಗಳು. ಇವೆಲ್ಲಾ ನಮಗೆ ಹೊಸದು. ಹೆಚ್ಚಿಗೆ ಏನೂ ತಿಳಿಯದ ಸನ್ನಿವೇಶ. ಪಿವಿಕೆ ಮನೆಗೆ ಮಂತ್ರಿಗಳು ಬರ್ತಾರೆ. ಅದಕ್ಕೆ ಇಷ್ಟು ಸೆಕ್ಯೂರಿಟಿ ಅಂತ ಗೊತ್ತಾಯ್ತು. ಆ ದಿನ ಬೆಳಗ್ಗೆ ನಮ್ಮ ಮನೆಯಲ್ಲೇ ಉಪಾಹಾರ. ನಮ್ಮ ಕುಟುಂಬದವರೊಡನೆ ವಿಶ್ವಾಸದಿಂದ ಮಾತುಕತೆ. ನನ್ನಲ್ಲಿ "ಕಮಲಕ್ಕ, ನಾನು ಕೇಂದ್ರದ ಮಂತ್ರಿ ಆಗೇನ್ರೀ. ನಿಮಗೆ ನನ್ನಿಂದ ಏನು ಸಹಾಯ ಆಗಬೇಕು ಕೇಳ್ರಿ" ಎಂದರು. ನನಗೆ ಹೊಸ ಅನುಭವ. ಏನು ಹೇಳಲಿ. ಸಲಿಗೆಯಿಂದ ಮಾತನಾಡುವವರಿಗೆ ಈಗ ಯೋಚಿಸಿ ಆಡಬೇಕು. ಅಸಂಬದ್ಧ ಮಾತುಗಳಿಗೆ ಅವಕಾಶವಿಲ್ಲ. "ನೀವು ಮೊದಲಿನಂತೆ ನಮ್ಮ ಜೊತೆ ವಿಶ್ವಾಸದಿಂದ, ಆತ್ಮೀಯತೆಯಿಂದ ನಮ್ಮೊಂದಿಗೆ ಇರಿ" ಎಂದಿದ್ದೆ. ಆ ವಿಶ್ವಾಸ ಕೊನೆವರೆಗೂ ನಮ್ಮೊಂದಿಗೆ ಇತ್ತು. ನಮ್ಮ ಮಕ್ಕಳ ಮದುವೆ, ಶಾಂತಿ, ಹೋಮ ಮುಂತಾದ ಶುಭ ಸಮಾರಂಭಗಳಿಗೆ ಪುರಸೊತ್ತು ಮಾಡಿಕೊಂಡು ಬಂದಿದ್ದರು. ಪಿವಿಕೆ ಅವರ ಶಿಷ್ಯ ಕೇಂದ್ರದ ಮಂತ್ರಿ ಎಂದು ನಮಗೂ ಕುಟುಂಬದವರಿಗೂ ಸ್ವಲ್ಪ ಹೆಚ್ಚೇ ಎನಿಸುವಷ್ಟು ಗೌರವ ತೋರಿಸುವ ಮಂದಿಗಳೂ ಕಂಡು ಬಂದರು. ಬದಲಾವಣೆ ಕೆಲವರಿಗೆ ಅಸೂಯೆಯಾಗಿರಬಹುದು. ಮಾತಿನ ವರಸೆಯಲ್ಲಿ ವ್ಯಕ್ತಪಡಿಸುತ್ತಿದ್ದರು. ಸರ್ಕಾರದ ಕಡೆಯಿಂದ ತುರ್ತು ಅಗತ್ಯ ಇದ್ದಾಗ ನಾವು ಅನಂತಕುಮಾರ್‌ಗೆ ತಿಳಿಸಿ ಅವರಿಗೆ ನೆರವು ನೀಡಿದ ಪ್ರಸಂಗಗಳು ಒಂದೆರಡು ಇದ್ದುವು.

ನನ್ನ ಮಗಳು ಲಕ್ಷ್ಮಿಗೆ ಹಾಸ್ಯ ಮಾಡಿ ಕೀಟಲೆ ಮಾಡುತ್ತಿದ್ದರು. ತುಂಬಾ ಚಿಕ್ಕಮಗುವಿನಿಂದಲೂ ಅವಳನ್ನು ನೋಡಿದ್ದರು. ಒಮ್ಮೆ ಶಿವಮೊಗ್ಗದಲ್ಲಿ ಎಬಿವಿಪಿ ಪ್ರಾಂತ ಸಮ್ಮೇಳನ ನಡೆದಿತ್ತು. ಸಮಾರೋಪದ ಕಾರ್ಯಕ್ರಮಕ್ಕೆ ನಾನೂ ಮಕ್ಕಳು ಹೋಗಿದ್ದೆವು. ವೇದಿಕೆಯ ಮೇಲೆ ಇದ್ದ ತಂದೆಯನ್ನು ನೋಡಿ 'ಅಣ್ಣಾ' ಎಂದು ಹೇಳಿದ್ದಳು. ಲಕ್ಷ್ಮಿಗೆ "ಯಾವಾಗಲೂ ನೀನು 'ಅಪ್ಪಾಲೇ' ಎಂದು ಕರೆದಿದ್ದೆ" ಅಂತ ಕೀಟಲೆ ಮಾಡುತ್ತಿದ್ದರು. ಅವಳು ಒಪ್ಪಿಕೊಳ್ಳುತ್ತಿರಲಿಲ್ಲ. 'ಅಪ್ಪಾ ಅಂತಾನೇ ನಾವು ಕರೆಯೋಲ್ಲ. ಅಂಥಾದ್ದರಲ್ಲಿ ಅಪ್ಪಾಲೇ ಅನ್ನಲು ಸಾಧ್ಯವೇ ಇಲ್ಲಾ' ಅಂತ. ಅನಂತಕುಮಾರ್ "ಇಲ್ಲಾ... ನೀನು ಹಾಗೇ ಕರೆದಿದ್ದು" ಎಂದು ಹಾಸ್ಯ, ವಿನೋದ ನಡೆಯುತ್ತಿತ್ತು. ಅವಳ ಮದುವೆ ಆದ ಮೇಲೂ ಆ ಪ್ರಸಂಗ ಜ್ಞಾಪಿಸುತ್ತಿದ್ದರು. ನನ್ನಕ್ಕ ಸಂಗೀತ ವಿದುಷಿ. ಅವಳ ಹಾಡನ್ನು ಕೇಳಿದಾಗ ಒಮ್ಮೆ ನಮ್ಮ ಮನೆಯಲ್ಲೇ ಎಲ್ಲ ವಿವರ ತಿಳಿದು ಅವಳಿಗೆ ಕೇಂದ್ರದ ವತಿಯಿಂದ ನಡೆಸುವ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್ ಗಾಗಿ ಸಂಗೀತದಲ್ಲಿ ಪ್ರತಿಭಾವಂತರಿಗೆ ನಡೆಸುವ ಪರೀಕ್ಷೆಗೆ ಜಡ್ಜ್ ಆಗಿ ನೇಮಕಾತಿಮಾಡಿಸಿದ್ದರು. ಸುಮಾರು ವರ್ಷ ನನ್ನಕ್ಕ ಆ ಕರ್ತವ್ಯ ನಿಭಾಯಿಸಿದ್ದಳು.

(ಪುಟ 6 ರಲ್ಲಿ ಮುಂದುವರಿದಿದೆ)

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **460** 20/10/24 | ಅನಂತವನ, ಬಿ. ಪಿ. ವಾಡಿಯಾ ರಸ್ತೆ, ಬೆಂಗಳೂರು | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು | ವಿವಿಧ ಜಾತಿಯ 10 ಗಿಡಗಳನ್ನು ನೆಡಲಾಯಿತು. |
| **461** 29/09/24 | ಅರಮನೆ ಮೈದಾನದ ಶ್ರೀ ಕೃಷ್ಣ ವಿಹಾರದ ತ್ರಿಪುರವಾಸಿನಿಯ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಇಂಜನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು | ನಾನಾ ಜಾತಿಯ 10 ಗಿಡಗಳನ್ನು ನೆಡಲಾಯಿತು., |
| **462** 03/11/24 | ಬೆಂಗಳೂರಿನ ವಿಶ್ವವಿದ್ಯಾಲಯ ಬಯೋ ಪಾರ್ಕ್-1 ಎನ್ ಎಸ್ ಎಸ್ ಭವನದ ಹಿಂಭಾಗದ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಸ್ಥಳೀಯರು, ಹಸಿರು ಯೋಧರು, ಮೊದಲಾದವರು | ವಿವಿಧ ಜಾತಿಯ 10 ಗಿಡಗಳನ್ನು ನೆಟ್ಟು ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು. |
| **463** 10/11/24 | ಚಿಂತಾಮಣಿಯ ಎನ್ ಆರ್ ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಡಾ. ಶ್ರೀನಾಥ್, ಬಿಎಂಎಸ್ ಆರ್ಕಿಟೆಕ್ಚರ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು. | ವಿವಿಧ ಜಾತಿಯ 25 ಗಿಡಗಳನ್ನು ನೆಡಲಾಯಿತು. |
| **464** 17/11/24 | ಬೆಂಗಳೂರಿನ ಯಾರಬ್ ನಗರದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಯ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಇಂಜನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು. | ವಿವಿಧ ಜಾತಿಯ15 ಗಿಡಗಳನ್ನು ನೆಡಲಾಯಿತು. |

ಪುಟ 5 ರಿಂದ ನನ್ನ ನಾದಿನಿ ಅಮೆರಿಕಾಕ್ಕೆ ಹೋಗಿದ್ದಳು. ವಾಪಸ್ಸು ಬರುವಾಗ ಏರ್‌ಪೋರ್ಟ್ ನಲ್ಲಿ ಪಾಸ್ ಪೋರ್ಟ್ ಕಳೆದು ಹೋಯಿತು. ವಿದೇಶಿ ವೀಸಾ ಮುಗಿದಿದೆ. ಆ ಸಂದರ್ಭದಲ್ಲಿ ತುರ್ತಾಗಿ ಪಾಸ್ ಪೋರ್ಟ್ ವ್ಯವಸ್ಥೆ ಮಾಡಿ ಸ್ವದೇಶಕ್ಕೆ ಏನೂ ತೊಂದರೆ ಇಲ್ಲದೆ ಬರುವಂತೆ ಮಾಡಿದ್ದರು, ಶಿವಮೊಗ್ಗದ ನಮ್ಮ ಆತ್ಮೀಯರ ಮನೆಯಲ್ಲಿ ನಡೆದ ದುರ್ಘಟನೆ. ಅವರ ಮಗ ಇಲ್ಲಿನ ವ್ಯಾಸಂಗ ಮುಗಿಸಿ ಅಮೆರಿಕಾಕ್ಕೆ ಹೆಚ್ಚಿನ ಶಿಕ್ಷಣಕ್ಕೆ ಹೋಗಿದ್ದ ಕೆಲವೇ ತಿಂಗಳಲ್ಲಿ ರಸ್ತೆ ಅಪಘಾತದಲ್ಲಿ ಮೃತನಾದ. ಅಲ್ಲಿಂದ ಅವನ ಶವ ತರಿಸಲು ಅನಂತಕುಮಾರ್ ಏರ್ಪಾಡು ಮಾಡಿದ್ದರು. ವಯಸ್ಸಿಗೆ ಬಂದ ಮಗನ ಸಾವಿನ ದುಃಖದಲ್ಲೂ ಆ ದಂಪತಿಗಳು ಧನ್ಯವಾದ ಹೇಳಿ 'ನೀವು ಸಹಾಯ ಮಾಡದಿದ್ದರೆ ಅನಾಥ ಶವ ಎಂದು ಯಾರೋ ಅಂತ್ಯಕ್ರಿಯೆ ಮಾಡಿರುತ್ತಿದ್ದರು. ನಿಮ್ಮಿಂದ ಮುಖ ನೋಡಲು ಸಿಕ್ಕಿತು'ಅಂಥ ಗೋಳಾಡುತ್ತ ನುಡಿದಿದ್ದರು.

ನಮ್ಮ ಮನೆಯ ಎಲ್ಲಾ ಶುಭ ಕಾರ್ಯಕ್ರಮಗಳಿಗೆ ತೇಜಸ್ವಿನಿ ಮತ್ತು ಅನಂತಕುಮಾರ್ ಬಂದಿದ್ದಾರೆ. ಕಾರ್ಯ ಒತ್ತಡವಿದ್ದರೂ ಹಾಜರಿ ಹಾಕುತ್ತಿದ್ದರು. ಇದೆಲ್ಲಾ ನಮಗೆ ಮರೆಯಲು ಸಾಧ್ಯವೇ? ಒಮ್ಮೆ ಅವರ ಮನೆಯಲ್ಲಿ ವಿಶೇಷ ಪೂಜೆ. ಜಪ ತಪ ಏರ್ಪಾಡು ಮಾಡಿದ್ದರು. ಅದಕ್ಕೆ ನಾವಿಬ್ಬರು ದಂಪತಿಗಳು ಬರಬೇಕೆಂದು ಒತ್ತಾಯ. ಆದರೆ ನನಗೆ ಶಿವಮೊಗ್ಗ ಮನೆಯಲ್ಲಿ, ನಮ್ಮ ಅತ್ತೆಗೆ ಆರೋಗ್ಯ ಸರಿ ಇಲ್ಲದೆ ಬರಲು ಆಗುತ್ತಿರಲಿಲ್ಲ. ಆದರೆ ಪಿವಿಕೆ "ಅಷ್ಟು ಹೇಳಿದ್ದಾರೆ, ಬೆಳಗ್ಗೆ ಹೋಗಿ ರಾತ್ರಿಗೇ ವಾಪಸ್ಸು ಬರೋಣ" ಎಂದು ಹೇಳಿ ನಮ್ಮತ್ತೆಗೆ ಬೇರೆ ವ್ಯವಸ್ಥೆ ಮಾಡಿ ಬೆಳಗ್ಗೆ ಮೂರು ಗಂಟೆಗೆ ಕಾರಿನಲ್ಲಿ ಹೊರಟು ರಾತ್ರಿ ಹತ್ತು ಗಂಟೆಗೆ ಮನೆಗೆ ಬಂದಿದ್ದೆವು. ನಾವು ಅವರ ಕುಟುಂಬದ ಸದಸ್ಯರೇ ಆಗಿದ್ದೆವು. ಅವರ ಮಗಳು ಐಶ್ವರ್ಯ ಮದುವೆಯಲ್ಲೂ ಅಷ್ಟೆ.

ಶ್ರೀಮತಿ ಸುಷ್ಮಾ ಸ್ವರಾಜ್ ಒಮ್ಮೆ ವರಮಹಾಲಕ್ಷ್ಮಿ ಪೂಜೆ ಸಂದರ್ಭದಲ್ಲಿ ಬಂದಿದ್ದಾಗ ನನಗೂ ಆಮಂತ್ರಣ ಇತ್ತು. ಸಾಯಂಕಾಲ ಆ ದಿನ ವಿಪರೀತ ಮಳೆ. ಪೂಜೆ ಮುಗಿದ ನಂತರ ಊಟ. ನಾನು ಬಂದಿದ್ದ ಇತರ ಪರಿಚಯದವರೊಡನೆ ಮಾತನಾಡುತ್ತ ಊಟ ಮುಗಿಸಿದ್ದೆ. ಶ್ರೀಮತಿ ಸುಷ್ಮಾ ಸ್ವರಾಜ್ ಅವರೊಡನೆ, ವಿಶೇಷ ಅತಿಥಿಗಳೊಡನೆ ನನಗೂ ಭೋಜನಕ್ಕೆ ವ್ಯವಸ್ಥೆ ಮಾಡಿದ್ದರೆಂದು ನನಗೆ ಗೊತ್ತಿರಲಿಲ್ಲ. ನನಗೆ ಕರೆಯಲು ಬಂದಾಗ ನನ್ನ ಊಟ ಮುಗಿದಿತ್ತು. ಮೊದಲೇ ನನಗೆ ತಿಳಿಸಿರಲಿಲ್ಲ. "ಕಮಲಕ್ಕಾ, ಎಂಥಾ ಕೆಲಸ ಆಯ್ತು " ಅಂಥ ಪೇಚಾಡಿದ್ದರು. ಹೀಗೆ ಸಣ್ಣಪುಟ್ಟ ವಿಷಯಗಳಲ್ಲೂ ಅವರ ಪೇಚಾಟ ಕಂಡಿದ್ದೆವು. ಆ ಜನಜಂಗುಳಿಯಲ್ಲಿ ಮಾಮೂಲು ಸಂಗತಿ ಅಷ್ಟೇ.

ಒಮ್ಮೆ ಶಿವಮೊಗ್ಗದಲ್ಲಿ ಸಮಾರಂಭ. ನಾವು ಬೆಂಗಳೂರಿನಲ್ಲಿದ್ದೆವು. ಅನಂತಕುಮಾರ್ ಹೆಲಿಕಾಪ್ಟರಿನಲ್ಲಿ ಸಮಾರಂಭಕ್ಕೆ ಬಂದಿದ್ದರು. ನಾವು ಆ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ವಾಪಸ್ಸು ಬರುವವರಿದ್ದೆವು. ಆದರೆ ಆಗಿದ್ದೇ ಬೇರೆ. ಅಲ್ಲಿ ಸಿಕ್ಕಿದ ಅನಂತಕುಮಾರ್ ಬಲವಂತ ಮಾಡಿ ತಮ್ಮೊಡನೆ ನಮ್ಮಿಬ್ಬರನ್ನು ಹೆಲಿಕಾಪ್ಟರಿನಲ್ಲಿ ಮೈಸೂರಿಗೆ ಕರೆದುಕೊಂಡು ಹೊರಟು ಅಲ್ಲಿ ಒಂದು ಸಭೆಯ ನಂತರ ಬೆಂಗಳೂರಿಗೆ ಅದೇ ಹೆಲಿಕಾಪ್ಟರಿನಲ್ಲಿ ಕರೆದು ತಂದಿದ್ದರು. ಅವರು ಒಬ್ಬರೇ ಬಂದಿದ್ದರು. ಏನೋ ಖುಷಿ. "ಈವತ್ತು ನಮ್ಮ ಅಮ್ಮ ಬದುಕಿದ್ದರೆ ಎಷ್ಟು ಸಂತೋಷ ಪಡುತ್ತಿದ್ದರೋ" ಎಂದು ಹೇಳಿದ್ದರು. ನಮಗೂ ಹೊಸ ಅನುಭವ. ಹೆಲಿಪ್ಯಾಡ್‌ನಿಂದ ಪೂರ್ತಿ ಮನೆ ತಲುಪುವವರೆಗೂ ವ್ಯವಸ್ಥೆ ಮಾಡಿಸಿದ್ದು, ದಾರಿಯಲ್ಲಿ ಇವರೊಡನೆ ಮುಕ್ತವಾಗಿ ಮಾತನಾಡಿದ್ದು, ಆ ಸಂದರ್ಭ ನೆನಪಿಗೆ ಬರುತ್ತಿರುತ್ತದೆ. ತೀರಾ ಸರಳತೆಯ ವ್ಯಕ್ತಿ ಅನಂತಕುಮಾರ್.

ಅನಂತಕುಮಾರ್ ಎಬಿವಿಪಿಯಿಂದ ಆಡಳಿತಾರೂಢ ಬಿಜೆಪಿ ಸೇರಿದ ಮೇಲೆ ಮೇಲಿನ ಹಂತ ತಲುಪಿದ ಮೇಲೆ ಇವರೊಡನೆ ಇದ್ದ ಕಾರ್ಯಕರ್ತರಿಗೆ ಕೆಲವರಿಗೆ ತಮಗೂ ಇಂತಹ ಅವಕಾಶ ಸಿಗಬಾರದೇ ಎಂದು ಅನಿಸಿರಬಹುದು. ಕೆಲವರು ಆಕಾಂಕ್ಷಿಗಳು ಅದನ್ನು ಪರೋಕ್ಷವಾಗಿ,



ಪ್ರತ್ಯಕ್ಷವಾಗಿ ಹೇಳುತ್ತಲೂ ಇದ್ದರು. ಅನಂತಕುಮಾರ್ ಈ ಹಂತ ತಲುಪಲು ಪಿವಿಕೆ ಅವರ ಮಧ್ಯಸ್ಥಿಕೆ ಇರಬಹುದು ಎಂಬ ಊಹೆ. ಹಾಗಾಗಿ ಎಷ್ಟೋ ಸಲ ನಮ್ಮ ಮನೆಯಲ್ಲಿ ವ್ಯಕ್ತ ಪಡಿಸಿದವರೂ ಇದ್ದರು. ಇವರು ಅವರಿಗೆ ಏನು ಉತ್ತರ ಕೊಡುತ್ತಿದ್ದರೋ ಗೊತ್ತಿಲ್ಲ. ಕೆಲವರು ನಾನು ಪಿವಿಕೆಗೆ ತಿಳಿಸಲಿ ಎಂಬ ಭಾವನೆಯಿಂದ ನನ್ನ ಹತ್ತಿರ ಹೇಳಿಕೊಂಡಿದ್ದರು ಈ ಬಗ್ಗೆ ನಾನು ಒಮ್ಮೆ ಇವರನ್ನು ಕೇಳಿದ್ದೆ. "ನಾವೂ ಪರಿಶ್ರಮ ಪಟ್ಟಿದ್ದೇವೆ. ನಮಗೆ ಉನ್ನತ ಸ್ಥಾನ ಸಿಗಲಿಲ್ಲವೆಂದು, ಅನ್ಯಾಯ ಆಗಿದೆಯೆಂದು ನೊಂದಿದ್ದಾರೆ" ಅಂತ. ಆಗ ಇವರು "ಇದರಲ್ಲಿ ನನ್ನ ಪಾತ್ರ ಏನು ಬಂತು? ಅನಂತಕುಮಾರ್ ಸ್ವಂತ ಸಾಮರ್ಥ್ಯದಿಂದ ಮೇಲೆ ಬಂದಿದ್ದಾನೆ. ವ್ಯವಹಾರ ಚತುರತೆ, ಸಂಘಟನಾ ಶಕ್ತಿ, ಎಲ್ಲರೊಡನೆ ಬೆರೆತು ಒಂದಾಗುವ ಸ್ವಭಾವ, ಇವೆಲ್ಲ ಇರುವುದರಿಂದ ಮತ್ತು ಅದೃಷ್ಟವೂ ಒದಗಿದೆ. ಒಳ್ಳೆಯ ಕಾರ್ಯಗಳನ್ನು ಮಾಡುತ್ತಿದ್ದಾನೆ. ಅದರಲ್ಲಿ ಸಂಶಯವಿಲ್ಲ" ಎಂದಿದ್ದರು. ಮತ್ತೆ ನಿನ್ನ ಹತ್ತಿರ ಈ ಬಗ್ಗೆ ಯಾರಾದರೂ ಕೇಳಿದರೆ ಹೀಗೇ ಹೇಳು ಎಂದಿದ್ದರು.

ಅವರ ಆಲೋಚನಾ ಶಕ್ತಿ, ಗುರಿ, ಧ್ಯೇಯ, ಸಾಮಾಜಿಕ ಕಳಕಳಿ ಅದಮ್ಯ ಚೇತನದ ಚಟುವಟಿಕೆಗಳನ್ನು ನೋಡಿದರೆ ತಿಳಿಯುತ್ತದೆ. ಅದನ್ನು ಶ್ರೀಮತಿ ತೇಜಸ್ವಿನಿ ಅವರು ಮುಂದುವರೆಸಿಕೊಂಡು ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಪ್ರತಿ ವರ್ಷ, ಡಿಸೆಂಬರ್ 31 ಮತ್ತು ಜನವರಿ 1 ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳನ್ನು ನಾನೂ ನೋಡಿದವಳೇ. ವಂದೇ ಮಾತರಂ ಸಮೂಹ ಗಾಯನ, ನಮ್ಮ ಸಂಸ್ಕೃತಿ ಬಗ್ಗೆ ನಡೆಯುತ್ತಿದ್ದ ಹಾಡು ನೃತ್ಯ ನಾಟಕಗಳು ಹಾಸ್ಯ ಕಾರ್ಯಕ್ರಮಗಳು ಎಷ್ಟೊಂದು ಕಲಾವಿದರಿಗೆ ಅವಕಾಶ ಕೊಡುತ್ತಿದ್ದರು, ಪ್ರತಿಭಾ ಪುರಸ್ಕಾರ ಮಕ್ಕಳಿಂದ ಹಿರಿಯರ ತನಕ ಉತ್ಸಾಹದಿಂದ ಭಾಗವಹಿಸುವ ಕಾರ್ಯಕ್ರಮ.

ಯಾವುದೇ ಕಾರ್ಯಕ್ರಮದಲ್ಲಿ "ಕಮಲಕ್ಕ, ಮುಂದೆ ಬನ್ನಿ" ಎಂದು ಕರೆಯುತ್ತಿದ್ದರು. ನಮ್ಮ ಮಕ್ಕಳೂ ನೆನಪಿಸಿಕೊಳ್ಳುತ್ತಾರೆ. ಒಮ್ಮೆ ನೋಡಿದವರ ಹೆಸರು ನೆನಪಿಟ್ಟುಕೊಂಡು ಮಾತನಾಡಿಸುತ್ತಿದ್ದರು. ಮಗಳು ಕುಸುಮಾ ಅದೇ ಹೇಳ್ತಾಳೆ. ಪ್ರತಿ ಗುರುವಾರ ನಡೆಯುವ 'ಭಗವದ್ಗೀತಾ ಅಭಿಯಾನ', 'ಎ ಚಾಟ್' ಕಾರ್ಯಕ್ರಮ. ಅಲ್ಲಿ ಅವರ ಭಾವಚಿತ್ರ "ಕಮಲಕ್ಕ, ಕುಸುಮಾ, ಮುಂದೆ ಬನ್ನಿ, ಇಲ್ಲಿ ಕೂಡ್ರಿ" ಎಂದು ಕರೆಯುವಂತೆ ಇದೆ. ಇದೇ ಭಾವನೆಗಳನ್ನು ಶ್ರೀಮತಿ ತೇಜಸ್ವಿನಿ ಅವರೂ ಇಟ್ಟುಕೊಂಡಿದ್ದಾರೆ. ಅವರ ಕುಟುಂಬಕ್ಕೂ ನಮಗೂ ಇರುವ ಬಾಂಧವ್ಯವು ಹೀಗೇ ಗಟ್ಟಿಯಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ. ◆

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಅಕ್ಟೋಬರ್ ನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ ಮ: 2.00 ರಿಂದ 3.00 | 4650 | 2,20,650 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ: 12.30 ರಿಂದ 1.30 | 3100 | 1,44,600 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ: 12.30 ರಿಂದ 1.30 | 2700 | 1,23,500 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ: 12.30 ರಿಂದ 1.30 | 4650 | 1,01,100 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ: 12:30ರಿಂದ 1:30ರವರೆಗೆ | 4650 | 56,870 |
| 6 | ಶ್ರೀ ಈಶ್ವರ ದೇವಸ್ಥಾನ, ರೈಲ್ವೆ ಸ್ಟೇಷನ್ ರಸ್ತೆ, ಹುಬ್ಬಳ್ಳಿ ಮ: 12:30ರಿಂದ 1:30ರವರೆಗೆ | 2700 | 40,250 |
| 7 | ಬಸವೇಶ್ವರ ಆಸ್ಪತ್ರೆಯ ಸಮೀಪ, ಸೇಡಂ ರಸ್ತೆ, ಕಲಬುರ್ಗಿ ಮ: 12:30ರಿಂದ 1:30ರವರೆಗೆ | 7500 | 30,300 |
| 8. | ಮಹಾತ್ಮ ಗಾಂಧೀಜಿ ಆಸ್ಪತ್ರೆಯ ಆವರಣ, ಜೋಧಪುರ, ರಾಜಸ್ಥಾನ. ಮ: 12:30 ರಿಂದ 2:00ವರೆಗೆ | 5400 | 7000 |
| | ಒಟ್ಟು ಅಂದಾಜು | **35,350** | **724,270** |

# ‘ಧರ್ಮರಾಜ’ ಕಾರ್ನಾಡ್ ಸದಾಶಿವರಾಯರು

**ವ್ಯಕ್ತಿ ವಿಶೇಷ ಮಾಲಿಕೆ**

**- ಕೆ. ಜನಾರ್ದನ ತುಂಗ**

ರಾಷ್ಟ್ರಪ್ರೇಮದ ಜ್ವರ ಹತ್ತಿಸಿಕೊಂಡ ವ್ಯಕ್ತಿಯೊಬ್ಬ ಏನೇನು ಮಾಡಬಹುದು? ಆತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಬಹುದು; ಸಮುದಾಯದ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಾಕಿಕೊಳ್ಳಬಹುದು; ಸಾಮಾಜಿಕ ಅಸಮಾನತೆಗಳನ್ನು ತೊಡೆದುಹಾಕಲು ಪ್ರಯತ್ನಿಸಬಹುದು. ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಸಕಲಸಂಪತ್ತನ್ನೂ ಈ ಮಹತ್ಕಾರ್ಯಗಳಿಗೆ ವಿನಿಯೋಗಿಸಬಹುದು. ಇವೆಲ್ಲವನ್ನೂ ಮಾಡಿದ ಕೆಲವೇ ವ್ಯಕ್ತಿಗಳ ಸಾಲಿಗೆ ಸೇರುವ ವ್ಯಕ್ತಿ ಕಾರ್ನಾಡ್ ಸದಾಶಿವರಾಯರು. ಶಿವರಾಮ ಕಾರಂತರು ಇವರ ಬದುಕನ್ನೇ ಆಧಾರವಾಗಿಟ್ಟುಕೊಂಡು “ಔದಾರ್ಯದ ಉರುಳಲ್ಲಿ” ಎಂಬ ಕಾದಂಬರಿಯನ್ನೇ ಬರೆದರು. ಆ ಮಟ್ಟದ ತ್ಯಾಗಜೀವನವನ್ನು ನಡೆಸಿದವರು, ಕಾರ್ನಾಡ್ ಸದಾಶಿವರಾಯರು.



ರಾಜರ ಆಡಳಿತದಲ್ಲಿದ್ದ ಮೈಸೂರು ಪ್ರಾಂತ್ಯಕ್ಕೆ ಬ್ರಿಟಿಷ್ ಆಡಳಿತದ ಬಿಸಿ ಅಷ್ಟಾಗಿ ತಾಕಿರಲಿಲ್ಲ. ಆದರೆ, ಬ್ರಿಟಿಷರ ದುರಾಡಳಿತಕ್ಕೆ ನೇರವಾಗಿ ಬಲಿಯಾದ ಕನ್ನಡ ಜಿಲ್ಲೆಗಳಲ್ಲಿ ಸ್ವಾತಂತ್ರ್ಯದ ಹಂಬಲ ೧೯ನೆಯ ಶತಮಾನದ ಕೊನೆಯಭಾಗದಲ್ಲಿಯೇ ತೀವ್ರಗೊಳ್ಳತೊಡಗಿತ್ತು. ಮಂಗಳೂರಿನಲ್ಲಿ ಕುದ್ಮಲ್ ರಂಗರಾಯರ ನೇತೃತ್ವದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳಲ್ಲಿ ಜನರು ಭಾಗವಹಿಸತೊಡಗಿದ್ದರು. ಅವರ ‘ದಲಿತೋದ್ಧಾರ’ ಚಳವಳಿಯಿಂದ ಅನೇಕರು ಪ್ರಭಾವಿತರಾಗಿದ್ದರು. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಕುದ್ಮಲ್ ರಂಗರಾಯರ ಪ್ರಭಾವಕ್ಕೆ ಸಿಕ್ಕಿದ ಸದಾಶಿವರಾಯರು ತಮ್ಮ ಸ್ಲೇಟು, ಪುಸ್ತಕ, ಬಳಪ, ಬಟ್ಟೆಬರೆಗಳನ್ನು ತಮ್ಮ ದಲಿತ ಸಹಪಾಠಿಗಳಿಗೆ ಹಂಚಿಬಿಟ್ಟಿದ್ದರು! ದೊಡ್ಡವರಾದ ಮೇಲೆ ದಲಿತರಿಗಾಗಿ ಮಂಗಳೂರಿನ ದೇರೆಬೈಲಿನಲ್ಲಿ ತಮ್ಮದೇ ಜಮೀನಿನಲ್ಲಿ ಸ್ವಂತ ಖರ್ಚಿನಿಂದ ಒಂದು ವಸತಿ ಕಾಲೋನಿಯನ್ನೇ ನಿರ್ಮಿಸಿಕೊಟ್ಟರು.

ಮಂಗಳೂರಿನಿಂದ ಉತ್ತರದಲ್ಲಿದ್ದ ಕಾರ್ನಾಡು ಎಂಬ ಪುಟ್ಟಹಳ್ಳಿಯಲ್ಲಿ ೧೮೮೧ರಲ್ಲಿ ಜನಿಸಿದ ಸದಾಶಿವರಾಯರ ತಂದೆ ರಾಮಚಂದ್ರರಾಯರು, ತಾಯಿ ರಾಧಾಬಾಯಿ. ಪ್ರಾಥಮಿಕ ವಿದ್ಯಾಭ್ಯಾಸ ಮಂಗಳೂರಿನಲ್ಲಿ, ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಪದವಿ, ನಂತರ ಮುಂಬಯಿಯಲ್ಲಿ ಕಾನೂನು ವ್ಯಾಸಂಗ. ಮಂಗಳೂರಿಗೆ ಮರಳಿ ವೃತ್ತಿ ಆರಂಭಿಸಿದ ಸದಾಶಿವರಾಯರಿಗೆ ತಮ್ಮ ವೃತ್ತಿಗಿಂತ ಹೆಚ್ಚಾಗಿ ಸಾಮಾಜಿಕ ಕಾರ್ಯಗಳಲ್ಲಿಯೇ ಆಸಕ್ತಿ. ವಿಧವಾ ವಿವಾಹ, ಅಸ್ಪೃಶ್ಯತಾ ನಿವಾರಣೆ ಮುಂತಾದ ಅನೇಕ ಕಾರ್ಯಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು.

ವಿಧವೆಯರು ಮತ್ತು ದುರ್ಬಲ ಮಹಿಳೆಯರ ಸಬಲೀಕರಣಕ್ಕಾಗಿ ‘ಮಹಿಳಾ ಸಭಾ’ ಪ್ರಾರಂಭ ಮಾಡಿದರು. ಈ ಕಾರ್ಯದಲ್ಲಿ ಅವರಿಗೆ ಜೊತೆಯಾಗಿದ್ದವರು ಅವರ ಪತ್ನಿ ಶಾಂತಾಬಾಯಿ. ತಮ್ಮ ಮನೆಯಲ್ಲಿಯೇ ‘ತಿಲಕ್ ವಿದ್ಯಾಲಯ’ ಪ್ರಾರಂಭಿಸಿ ಜಾತಿ, ಮತಗಳ ಭೇದವಿಲ್ಲದೆ ಎಲ್ಲರಿಗೂ ಉತ್ತಮ ಶಿಕ್ಷಣ ದೊರೆಯುವಂತೆ ಮಾಡಿದರು. ಮುಂದೆ ಇಂತಹ ೧೮ ಶಾಲೆಗಳನ್ನು ತೆರೆದು ಆ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ನೂಲುವಿಕೆ, ಹೊಲಿಗೆ, ನೇಯ್ಗೆ, ಕರಕುಶಲವೃತ್ತಿಗಳಲ್ಲಿ ತರಬೇತಿ ನೀಡಲು ಪ್ರಾರಂಭಿಸಿದರು. ಮಂಗಳೂರಿನಲ್ಲಿ ಕೈಮಗ್ಗದ ಬಟ್ಟೆಗಳನ್ನು ನೇಯ್ಗೆ ಮಾಡುವ ಉದ್ದೇಶದಿಂದ ಅವರು ಸಾಧಕಾಶ್ರಮವನ್ನು ಪ್ರಾರಂಭಿಸಿದರು. ಸದಾಶಿವರಾಯರ ಮನೆ ಸ್ವಾತಂತ್ರ್ಯ ಹೋರಾಟಗಾರರಿಗೆ ಧರ್ಮಛತ್ರದಂತಿತ್ತು. ಗಾಂಧಿ, ರಾಜಾಜಿ, ನೆಹರೂ, ಕಸ್ತೂರ್‌ಬಾ, ಚಿತ್ತರಂಜನ್ ದಾಸ್, ಸರೋಜಿನಿ ನಾಯ್ಡು ಮುಂತಾದ ಮಹನೀಯರೂ ಮಂಗಳೂರಿಗೆ ಬಂದಾಗ ಅವರ ಮನೆಗೆ ಭೇಟಿ ನೀಡಿದ್ದರು.

ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಮತ್ತು ಸ್ವಾತಂತ್ರ್ಯದ ಗಳಿಕೆಗಾಗಿ ಜನರನ್ನು ಒಗ್ಗೂಡಿಸಲು ಅವರು ಇಡೀ ಕರಾವಳಿಯನ್ನು ಸುತ್ತಿದರು. ದಲಿತರಿಗೆ ದೇವಾಲಯ ಪ್ರವೇಶ ದೊರಕಿಸಲು ಮಠಾಧೀಶರ ಮನವೊಲಿಸಿ ಅವರಿಂದ ಅನುಮತಿಪತ್ರ ದೊರಕಿಸಿಕೊಂಡರು. ಮಂಗಳೂರಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಪ್ರಾರಂಭಿಸಿ ಅದರ ಜಿಲ್ಲಾಧ್ಯಕ್ಷರೂ ಆದರು. ರಾಜ್ಯ ಕಾಂಗ್ರೆಸಿನ ಉಪಾಧ್ಯಕ್ಷರೂ ಆದರು. ೧೯೧೯ರಲ್ಲಿ ಗಾಂಧೀಜಿ ಪ್ರಾರಂಭಿಸಿದ ರೌಲತ್ ಕಾಯಿದೆ ಮತ್ತು ಜಲಿಯನ್ ವಾಲಾ ಬಾಗ್ ಪ್ರಕರಣಗಳನ್ನು ಕುರಿತ ಸತ್ಯಾಗ್ರಹದಲ್ಲಿ ಕರ್ನಾಟಕದಿಂದ ನೋಂದಾಯಿಸಿಕೊಂಡ ಪ್ರಥಮ ಸ್ವಯಂ ಸೇವಕರು ಸದಾಶಿವರಾಯರು. ಕರಾವಳಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸುವ ಜವಾಬ್ದಾರಿ ಅವರ ಹೆಗಲಿಗೆ ಬಿದ್ದಿತು.. ಆದರೆ, ೧೯೨೧ - ೨೨ರ ಹೊತ್ತಿಗೆ ತನ್ನ ಒಬ್ಬನೇ ಮಗ, ಕೊನೆಯ ಮಗಳು ಮತ್ತು ಮಡದಿಯನ್ನು ಕಳೆದುಕೊಂಡು ಮಾನಸಿಕವಾಗಿ ಜರ್ಝರಿತರಾದ ಸದಾಶಿವರಾಯರು ನೆಮ್ಮದಿಗಾಗಿ ಸಾಬರ್ಮತಿ ಆಶ್ರಮಕ್ಕೆ ತೆರಳಿದರು. ಆದರೆ ೧೯೨೩ರಲ್ಲಿ ದಕ್ಷಿಣಕನ್ನಡದ ಜನರನ್ನು ಕಂಗಾಲಾಗಿಸಿದ ಭೀಕರಪ್ರವಾಹದ ನಿಮಿತ್ತ ಊರಿಗೆ ಮರಳಿದರು. ಸಂತ್ರಸ್ತರಿಗೆ ಸಹಾಯ ಮಾಡಲು ತಮ್ಮಲ್ಲಿದ್ದ ಬಂಗಾರ, ಆಭರಣ, ವಸ್ತ್ರಗಳು, ಧಾನ್ಯ ಎಲ್ಲವನ್ನೂ ವಿನಿಯೋಗಿಸುವುದರ ಜೊತೆಗೆ ಬೆಲೆಬಾಳುವ ಪಿತ್ರಾರ್ಜಿತ ಆಸ್ತಿಯನ್ನೂ ಪರಭಾರೆ ಮಾಡಿದರು.

ಗಾಂಧೀಜಿಯವರು ೧೯೨೦ರಲ್ಲಿ ಮಂಗಳೂರಿಗೆ ಭೇಟಿ ನೀಡಿದಾಗ ಅವರ ಸಾರ್ವಜನಿಕ ಸಭೆಯನ್ನು ಸದಾಶಿವರಾಯರೇ ವ್ಯವಸ್ಥೆ ಮಾಡಿದ್ದರು. ಅದೇ ವರ್ಷ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಭಾಗವಹಿಸಿದ್ದರು. ೧೯೩೦ರಲ್ಲಿ ಅಂಕೋಲಾದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಕರಾವಳಿ ಜಿಲ್ಲೆಗಳ ಸಾವಿರಾರು ಜನರು ಭಾಗವಹಿಸಿದ್ದರು. ಈ ಚಳುವಳಿಯ ನೇತೃತ್ವವನ್ನು ವಹಿಸಿದ್ದ ಸದಾಶಿವರಾಯರನ್ನು ಸರಕಾರವು ಬಂಧಿಸಿ ತಿರುಚಿನಾಪಳ್ಳಿ ಮತ್ತು ವೆಲ್ಲೂರು ಜೈಲುಗಳಲ್ಲಿ ಇರಿಸಿತು. ೧೯೩೪ರಲ್ಲಿ ಅವರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದಾಗ ಮತ್ತೆ ಬಂಧಿಸಲ್ಪಟ್ಟರು. ಒಟ್ಟು ಮೂರು ಬಾರಿ ಅವರನ್ನು ಬಂಧಿಸಿದ ಸರಕಾರವು ಅವರನ್ನು ಸುಮಾರು ಐದು ವರ್ಷಗಳ ಕಾಲ ಸೆರೆಯಲ್ಲಿರಿಸಿತ್ತು. ೧೯೩೪ರಲ್ಲಿ ಬಂಧಿತರಾದಾಗ ಅವರಿಗೆ ಕಠಿಣ ಶ್ರಮದ ಸಜೆಯನ್ನು ನೀಡಲಾಗಿತ್ತು. ಈ ಸಂದರ್ಭದಲ್ಲಿ ಜೈಲಿನಲ್ಲಿ ಖೈದಿಗಳ ನಡುವೆ ಸೊಳ್ಳೆಪರದೆ ನೀಡುವಂತಹ ವಿಚಾರದಲ್ಲಿಯೂ ತಾರತಮ್ಯ ನಡೆಯುತ್ತಿದ್ದುದನ್ನು ಪ್ರತಿಭಟಿಸಿ ತಮಗೆ ಒದಗಿಸಿದ ಸೊಳ್ಳೆಪರದೆಯನ್ನು ನಿರಾಕರಿಸಿದರು. ಇದರಿಂದಾಗಿ, ಅವರ ಆರೋಗ್ಯ ಹದಗೆಡಲು ಪ್ರಾರಂಭಿಸಿದರೂ ತಮ್ಮ ಕೆಲಸಗಳನ್ನು ಅವರು ನಿಲ್ಲಿಸಲಿಲ್ಲ. ಫೈಜ್‌ಪುರದಲ್ಲಿ ನಡೆದ ೧೯೩೬ರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಮರಳುತ್ತಿದ್ದಾಗ ಮುಂಬೈಯಲ್ಲಿ ಅವರ ಆರೋಗ್ಯ ತೀರಾ ಹದಗೆಟ್ಟಿತು. ಪರಿಣಾಮವಾಗಿ ಮುಂಬಯಿಯಲ್ಲಿಯೇ ನಿಧನರಾದರು.

ಕಾರಂತರು ಇವರನ್ನು ‘ಧರ್ಮರಾಜ’ ಎಂದು ಕರೆದಿದ್ದರು. ಅಂತಹ ಧರ್ಮರಾಜನಿಗೆ ಕೊನೆಗಾಲದಲ್ಲಿ ಹಸಿವಿನಿಂದ ಬಳಲುತ್ತಿದ್ದಾಗ ಕಾರಂತರ ಹತ್ತಿರವೇ ಹಣ ಕೇಳುವ ಪರಿಸ್ಥಿತಿ ಬಂದೊದಗಿತ್ತು. ಆಗರ್ಭ ಶ್ರೀಮಂತರ ಮನೆಯಲ್ಲಿ ಜನಿಸಿದ ಸದಾಶಿವರಾಯರು ಜನವರಿ ೯, ೧೯೩೭ರಂದು ಸಾಯುವ ವೇಳೆಗೆ ಅವರ ಅಂತ್ಯಕ್ರಿಯೆಗೂ ಹಣವಿರಲಿಲ್ಲ. ಅವರ ಅಂತ್ಯಕ್ರಿಯೆಯ ಖರ್ಚನ್ನು ಅವರ ಮೂವರು ಗೆಳೆಯರೇ ವಹಿಸಿಕೊಳ್ಳಬೇಕಾಯಿತು. ಅವರ ಮರಣದ ನಂತರ ಅವರ ತಾಯಿ ಮತ್ತು ಇಬ್ಬರು ಹೆಣ್ಣುಮಕ್ಕಳು ಬಾಡಿಗೆ ಮನೆಗೆ ತೆರಳಬೇಕಾಯಿತು. ಅವರು ಬದುಕಿದ್ದ ಎರಡಂತಸ್ತಿನ ಮನೆಯನ್ನು ಹರಾಜಿನಲ್ಲಿ ಕೊಂಡವರು ಅದನ್ನು ನೆಲಸಮ ಮಾಡಿದರು.

ಸದಾಶಿವರಾಯರ ಮರಣದ ನಂತರ ಅವರ ತಾಯಿಯನ್ನು ಭೇಟಿಯಾದ ಗಾಂಧೀಜಿಯವರು “ಅಮ್ಮಾ, ಇಂತಹ ಮಗನಿಗೆ ಜನ್ಮ ನೀಡಿದ ನಿಮಗೆ ದೇವರ ಆಶೀರ್ವಾದವಿದೆ” ಎಂದು ಸಾಂತ್ವನ ಹೇಳಿದ್ದರು.

ಕಾರಂತರ ಕಾದಂಬರಿಯ ಮೂಲಕ ಅಮರರಾದ ಸದಾಶಿವರಾಯರ ನೆನಪಿಗಾಗಿ ಮಂಗಳೂರಿನಲ್ಲಿ ಸದಾಶಿವರಾಯರ ಹೆಸರಿನ ರಸ್ತೆಯಿದೆ, ಒಂದು ಗ್ರಂಥಭಂಡಾರವೂ ಇದೆ. ಬೆಂಗಳೂರಿನ ಅತ್ಯಂತ ಶ್ರೀಮಂತ ಬಡಾವಣೆಗೆ ಸದಾಶಿವರಾಯರ ಹೆಸರನ್ನಿಟ್ಟಿರುವುದು ದೊಡ್ಡ ವಿಡಂಬನೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬಾವುಟ ಹಿಡಿದವರು, ಅವರ ಮಕ್ಕಳು, ಅವರ ಬಾಲಬಡುಕರು ಸ್ವತಂತ್ರಭಾರತದಲ್ಲಿ ಅಧಿಕಾರವನ್ನು ಅನುಭವಿಸುತ್ತ ಸಂಪತ್ತಿನ ಶರಧಿಯಲ್ಲಿ ತೇಲಾಡುತ್ತಿರುವುದನ್ನು ಕಂಡಾಗ ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿ ದಟ್ಟದರಿದ್ರರಾದ ಸದಾಶಿವರಾಯರ ಜೀವನಗಾಥೆ ಮನಮಿಡಿಯುತ್ತದೆ. ಈ ‘ದಕ್ಷಿಣ ಭಾರತದ ಗಾಂಧಿ’ಯ ಬಗ್ಗೆ ಇಂದಿನ ಮಕ್ಕಳು ಓದುವಂತಾಗಲಿ. ◆

# ಬೆಂಗಳೂರಿಗೆ 'ಅನಂತ' ಕೊಡುಗೆ

-ಜಿ. ಪಿ. ನಾಗರಾಜನ್



ಕಳೆದ ಶತಮಾನದ ಕೊನೆಯ ದಶಕ ಬೆಂಗಳೂರಿನ ಇತಿಹಾಸವನ್ನೇ ಬದಲಾಯಿಸಿದ ಕಾಲ. ಮಾಹಿತಿ ತಂತ್ರಜ್ಞಾನದ ಆವಿಷ್ಕಾರದ ನಂತರ ಭಾರತದಲ್ಲಿ ಬೆಂಗಳೂರು ಸಿಲಿಕಾನ್ ಸಿಟಿಯೆಂದೇ ಹೆಸರಾಗಿ ಬಹುತೇಕ ಎಲ್ಲ ಐಟಿ ಕಂಪನಿಗಳು ಬೆಂಗಳೂರಿನಲ್ಲಿ ತಮ್ಮ ಸುರಕ್ಷಿತ ನೆಲೆಯನ್ನು ಕಂಡುಕೊಂಡವು. ಬೆಂಗಳೂರು ಅಕ್ಷರಶಃ ದಶದಿಕ್ಕುಗಳಲ್ಲಿಯೂ ಬೆಳೆಯಲಾರಂಭಿಸಿತು. ಇದರ ಪರಿಣಾಮವಾಗಿ ನಗರದ ಮೂಲಸೌಲಭ್ಯಗಳ ಅಭಿವೃದ್ಧಿ ಸರ್ಕಾರದ ಆದ್ಯ ಕರ್ತವ್ಯವಾಗಿದ್ದು, ಬೆಂಗಳೂರಿನ ಶಾಸಕರ, ಸಂಸದರ ಹೊಣೆಗಾರಿಕೆಯೂ ನೂರ್ಮಡಿಯಾಯಿತು. ಇದೇ ಕಾಲಾವಧಿಯಲ್ಲಿ ಬೆಂಗಳೂರು ನಗರದ ದಕ್ಷಿಣ ಕ್ಷೇತ್ರದ ಸಂಸದರಾಗಿ ಸತತ ಆರುಬಾರಿ ಆಯ್ಕೆಯಾಗಿ ದಾಖಲೆ ನಿರ್ಮಿಸಿದ್ದ ಅನಂತಕುಮಾರ್ ನಗರದ ಬೆಳವಣಿಗೆಗೆ ನೀಡಿದ ಕೊಡುಗೆ ಗಣನಾರ್ಹವಾದದ್ದು. ಅವರ ನಿರಪೇಕ್ಷ ಸೇವೆಯ ಲಾಭ ಕೇವಲ ಅವರು ಪ್ರತಿನಿಧಿಸಿದ್ದ ಬೆಂಗಳೂರು ಕ್ಷೇತ್ರಕ್ಕೆ ಸೀಮಿತವಾಗಿರದೆ ಇಡೀ ಕರ್ನಾಟಕ ರಾಜ್ಯ ಮತ್ತು ರಾಷ್ಟ್ರಕ್ಕೆ ಲಭಿಸಿದ್ದು ಸರ್ವವಿದಿತ.

**ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ:** ಅತಿವೇಗವಾಗಿ ಬೆಳೆಯುತ್ತಿರುವ ವಿಶ್ವದ ಮಹಾನಗರಗಳಲ್ಲಿ ಒಂದೆಂದು ಪರಿಗಣಿತವಾದ ಬೆಂಗಳೂರಿಗೆ ಅಂತಾರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣದ ಅಗತ್ಯವನ್ನು ಮನಗಂಡ ಅನಂತಕುಮಾರ್ 1999ರಲ್ಲಿ ನಾಗರಿಕ ವಿಮಾನಯಾನ ಶಾಖೆಯ ಸಚಿವರಾದ ಕೂಡಲೆ ಆದ್ಯತೆ ನೀಡಿದ್ದು ಈ ಕೆಲಸಕ್ಕೆ. ಕೇವಲ ಹತ್ತು ತಿಂಗಳ ಅಲ್ಪ ಕಾಲಾವಧಿಯಲ್ಲಿ ದೇವನಹಳ್ಳಿಯ ಬಳಿ ತಲೆಯೆತ್ತಿದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕೋಟಿ ಕನ್ನಡಿಗರ ಬಹುಕಾಲದ ಕನಸನ್ನು ನನಸಾಗಿಸಿತು. ಬೆಂಗಳೂರಿನಿಂದ ನ್ಯೂಯಾರ್ಕ್‌ಗೆ ಮೊದಲ ನೇರ ವಿಮಾನ ಹಾರಿತು.

ಬೇಗನೆ ಕೊಳೆಯುವ ವಸ್ತುಗಳ ಸಾಗಾಣಿಕೆಗಾಗಿ ದೆಹಲಿಯಲ್ಲಿ ಮಾತ್ರ ಲಭ್ಯವಿದ್ದ ಪ್ರತ್ಯೇಕ ಟರ್ಮಿನಲ್ ವ್ಯವಸ್ಥೆಯೂ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ರೂಪುಗೊಳ್ಳಲು ಅನಂತಕುಮಾರ್ ಕಾರಣರಾದರು. ಇದರೊಂದಿಗೆ ಹಳೆಯ ಹೆಚ್‌ಎಎಲ್ ವಿಮಾನ ನಿಲ್ದಾಣದ ಸುಧಾರಣೆಗೂ ಸಹ ಅನಂತಕುಮಾರ್ ಶ್ರಮಿಸಿದ್ದರು.

**ಬೆಂಗಳೂರಿಗೆ ಮೆಟ್ರೋ - ನನಸಾದ ಕನಸು:** ಬೆಂಗಳೂರು ನಗರದ ನಿತ್ಯ ಸಮಸ್ಯೆಯಾದ ಸಂಚಾರ ದಟ್ಟಣೆಯ ಪರಿಹಾರಕ್ಕೆ ಅನಂತಕುಮಾರ್ ಕಂಡ ಕನಸು ಮೆಟ್ರೋ ರೈಲು. ಬೆಂಗಳೂರಿಗೆ ಮಾನೋ ರೈಲಿಗಿಂತ ಮೆಟ್ರೋ ರೈಲು ಅಗತ್ಯವೆಂಬ ರಾಜ್ಯ ಸರ್ಕಾರದ ನಿಲುವಿನ ಅಧ್ಯಯನದ ವರದಿಯನ್ನು ಸಮರ್ಥಿಸಿ, ಅದಕ್ಕೆ ಕೇಂದ್ರದ ಅನುಮೋದನೆ ದೊರೆಯಲು ಸಹಕರಿಸಿದವರು, ಅನಂತಕುಮಾರ್. ಈ ಬೃಹತ್ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯದ ಜಂಟಿಯೋಜನೆಯಾಗಿ ರೂಪುಗೊಳಿಸಿ ಕೇಂದ್ರದಿಂದ ಅನುದಾನದೊಂದಿಗೆ ಬಡ್ಡಿರಹಿತ ಸಾಲವನ್ನು ಕೊಡಿಸುವಲ್ಲಿ ಅನಂತ್ ಅವರ ಪ್ರಯತ್ನ ಸಫಲವಾಗಿತ್ತು. ಈ ಯೋಜನೆಯ ಜವಾಬ್ದಾರಿಯನ್ನು 'ಮೆಟ್ರೋ ಮ್ಯಾನ್' ಶ್ರೀಧರನ್ ಅವರಿಗೆ ವಹಿಸಿದರು. 2004ರಲ್ಲಿ ಯೋಜನಾ ಆಯೋಗದ ಅನುಮೋದನೆಯ ನಂತರ ಬೆಂಗಳೂರು ಮೆಟ್ರೋ ರೈಲು ಕಾರ್ಯಗತವಾಗಿ 2011ರ ಅಕ್ಟೋಬರ್ ನಲ್ಲಿ ಆರಂಭಗೊಂಡು ಇಂದು ದಿನವಿಡೀ ಲಕ್ಷಾಂತರ ಪ್ರಯಾಣಿಕರನ್ನು ಹೊತ್ತು ತಿರುಗುತ್ತಿದೆ. ಮೆಟ್ರೋ ರೈಲಿನ ಕೋಚ್‌ಗಳ ನಿರ್ಮಾಣ ಕಾರ್ಯವನ್ನು 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದ ಅಡಿಯಲ್ಲಿ ಸ್ಥಳೀಯ ಬಿಇಎಂಎಲ್ ಕಾರ್ಖಾನೆಗೆ ವಹಿಸಿ, ನೂರಾರು ಕೋಟಿಗಳ ವಿದೇಶಿ ವಿನಿಮಯವನ್ನು ಉಳಿಸಿದರು.

**ಶಿಕ್ಷಣವೇ ದೇಶದ ಪ್ರಗತಿಗೆ ಮೂಲ:** ದೇಶದ ಪ್ರಗತಿಗೆ ಮೂಲವೇ ಶಿಕ್ಷಣ ಎಂದು ನಂಬಿದ್ದ ಅನಂತಕುಮಾರ್ ತಮ್ಮ ಕ್ಷೇತ್ರದ ಅನೇಕ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಅಗತ್ಯಗಳಿಗೆ ಕ್ರಿಯಾತ್ಮಕವಾಗಿ ಸ್ಪಂದಿಸಿದವರು. ಶಿಥಿಲಗೊಂಡ ಶಾಲಾ ಕಟ್ಟಡಗಳ ದುರಸ್ತಿ, ಹೊಸ ಕಟ್ಟಡಗಳ ನಿರ್ಮಾಣ, ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ, ಕಂಪ್ಯೂಟರ್ ಪ್ರಯೋಗಾಲಯಗಳ ಸ್ಥಾಪನೆ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡಿ 'ವಿಶೇಷ ಚೇತನ'ಮಕ್ಕಳ ಶಾಲೆಗಳೂ ಸೇರಿದಂತೆ ಸುಮಾರು 200ಕ್ಕೂ ಹೆಚ್ಚಿನ ಶಾಲೆಗಳಿಗೆ ತಮ್ಮ ಸಂಸದರ ನಿಧಿಯ ಮೂಲಕ ಈ ಸೌಕರ್ಯಗಳನ್ನು ಒದಗಿಸಿದರು.

**ಆರೋಗ್ಯವೇ ಭಾಗ್ಯ:** ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನಂತಕುಮಾರ್ ಅವರು ಲಯನ್ಸ್ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಗೆ ತಮ್ಮ ಸಂಸದರ ನಿಧಿಯಿಂದ ಸುಸಜ್ಜಿತ ಕಣ್ಣು ತಪಾಸಣಾ ವಾಹನವನ್ನು ಒದಗಿಸಿದ್ದಾರೆ. ಇತ್ತೀಚಿನ ಸಾಮಾನ್ಯ ಆರೋಗ್ಯ ಸಮಸ್ಯೆಗಳಾದ ರಕ್ತದೊತ್ತಡ, ಮಧುಮೇಹ, ಹೃದಯಸಂಬಂಧಿ ಸಮಸ್ಯೆಗಳ ತಪಾಸಣೆ ಮತ್ತು ಸಲಹೆಗಳಿಗೆ 'ಇ-ಕ್ಷೇಮ' ಎಂಬ ವಿನೂತನ ಯೋಜನೆಯನ್ನು ರೂಪಿಸಿ ಬಿಬಿಎಂಪಿ ಸಹಯೋಗದಲ್ಲಿ ನಗರದ ವಿವಿಧ ಬಡಾವಣೆಗಳಲ್ಲಿ 18 ಕೇಂದ್ರಗಳನ್ನು ಸ್ಥಾಪಿಸಿರುವುದು ದೇಶದಲ್ಲೇ ಮೊದಲ ಪ್ರಯೋಗವೆನಿಸಿದೆ. ಶಾಲಾ ಮಕ್ಕಳಿಗಾಗಿ ಅನಂತಕುಮಾರ್ ಅವರು ಕಲ್ಪಿಸಿದ 'ಆರೋಗ್ಯ ಚೇತನ' ಎಂಬ ನಗದು ರಹಿತ ಮೆಡಿಕ್ಲೇಮ್ ಗ್ರೂಪ್ ಇನ್‌ಶೂರೆನ್ಸ್ ಆರೋಗ್ಯ ವಿಮಾ ಯೋಜನೆಯನ್ನು ಅಂದಿನ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು ಉದ್ಘಾಟಿಸಿದ್ದರು.

ಅನಂತಕುಮಾರ್ ಅವರ ಸಂಸದರ ನಿಧಿಯಿಂದ ರಾಷ್ಟ್ರೋತ್ಥಾನ ಬ್ಲಡ್ ಬ್ಯಾಂಕ್, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ವಾಣಿವಿಲಾಸ, ವಿಕ್ಟೋರಿಯ, ಜಯದೇವ, ಶ್ರೀ ಕೃಷ್ಣ ಸೇವಾಶ್ರಮ ಆಸ್ಪತ್ರೆಗಳು, ವಿವಿ ಪುರಂ, ಜಯನಗರ, ಬಸವನಗುಡಿ, ವಿದ್ಯಾಪೀಠ, ಯಾರಬ್ ನಗರ ಮುಂತಾದ ಬಡಾವಣೆಗಳ ಆರೋಗ್ಯ ಕೇಂದ್ರಗಳು ಆರ್ಥಿಕ ಬೆಂಬಲವನ್ನು ಪಡೆದು ಸದೃಢವಾಗಿವೆ. ಬಡ ರೋಗಿಗಳು ಕಡಿಮೆ ವೆಚ್ಚದಲ್ಲಿ ಡಯಾಲಿಸಿಸ್ ಚಿಕಿತ್ಸೆಯನ್ನು ಪಡೆಯುವಂತಾಗಲು ಡಯಾಲಿಸಿಸ್ ಕೇಂದ್ರಗಳಿಗೆ ಅನಂತಕುಮಾರ್ ಆರ್ಥಿಕ ನೆರವು ನೀಡಿದ್ದಾರೆ. ಶಂಕರ ಕ್ಯಾನ್ಸರ್ ಆಸ್ಪತ್ರೆಯ ನಿರ್ಮಾಣಕ್ಕೆ ಅನಂತಕುಮಾರ್ ಅವರ ಆರ್ಥಿಕ ಬೆಂಬಲ ಗಣನೀಯವಾದದ್ದು.

ಬೆಂಗಳೂರು ನಗರ ವಾಸಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಅನಂತಕುಮಾರ್ ತಮ್ಮ ಸಂಸದರ ನಿಧಿಯಿಂದ 500 ಸ್ಥಳಗಳಲ್ಲಿ ಬೋರ್‌ವೆಲ್ ತೆಗೆಸಿ ಮಿನಿ ಟ್ಯಾಂಕ್ ಗಳ ಮೂಲಕ ಸಾವಿರಾರು ಮನೆಗಳಿಗೆ ನೀರಿನ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದರು. ಅಂತರ್ಜಲದ ಮಟ್ಟವನ್ನು ವೃದ್ಧಿಗೊಳಿಸುವ ಮಳೆನೀರು ಕೊಯಿಲಿನ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಅನಂತಕುಮಾರ್ ಅವರ ಶ್ರಮ ಅನನ್ಯವಾದದ್ದು. ಮಹಾನಗರ ಪಾಲಿಕೆಯಿಂದ ದೇಶದಲ್ಲೇ ಪ್ರಥಮವಾಗಿ ಜಯನಗರದಲ್ಲಿ ಮಳೆನೀರು ಕೊಯ್ಲು ಮ್ಯೂಸಿಯಂ ಅನ್ನು ಸ್ಥಾಪಿಸಿದ ಕೀರ್ತಿ ಅನಂತಕುಮಾರ್ ಅವರದ್ದಾಗಿದೆ.

**ಮಾತೃ ಋಣ:** ತಮ್ಮ ತಾಯಿಯವರಾದ ಗಿರಿಜಾ ಶಾಸ್ತ್ರಿ ಅವರ ಸ್ಮರಣೆಯಲ್ಲಿ 2003ರಲ್ಲಿ ಸ್ಥಾಪಿಸಿದ 'ಅದಮ್ಯ ಚೇತನ' ಸಂಸ್ಥೆಯ ಆಶ್ರಯದಲ್ಲಿ ಪ್ರತಿದಿನ ಬೆಂಗಳೂರಿನ ವಿವಿಧ ಶಾಲೆಗಳ ಸುಮಾರು 72000 ಮಕ್ಕಳೂ ಸೇರಿದಂತೆ 2,00,000 ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸುತ್ತಿರುವ ಮೂಲಕ ಮಾತೃಋಣವನ್ನು ತೀರಿಸಿದ ಅನಂತಕುಮಾರ್ ಅವರ ಕಾರ್ಯ ಸದಾ ಸರ್ವದಾ ನಮನೀಯ. ಅನಂತಕುಮಾರ್ ಅವರ ನಂತರ ಈ ಸೇವಾ ಕಾರ್ಯವನ್ನು ಅವರ ಪತ್ನಿ ಶ್ರೀಮತಿ ತೇಜಸ್ವಿನಿ ಅವರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಪ್ರತಿ ತಿಂಗಳೂ ಮಕ್ಕಳಿಗೆ ಶಿಕ್ಷಣ, ಆರೋಗ್ಯ, ಕಲೆ, ಸನ್ನಡತೆ, ಸಂಸ್ಕೃತಿ, ಸಕಾರಾತ್ಮಕ ವಿಚಾರಗಳನ್ನು ಪರಿಚಯಿಸುವ 'ಚಿಣ್ಣರ ಚೇತನ' ಭಿತ್ತಿ ಪತ್ರಿಕೆಯನ್ನು ಸಹ ಅದಮ್ಯ ಚೇತನ ಪ್ರಕಟಿಸುತ್ತಿದೆ.

**ಪರಿಸರ ಪ್ರೇಮ:** ಪರಿಸರ ಸಂರಕ್ಷಣೆ ಅನಂತಕುಮಾರ್ ಅವರ ಆದ್ಯ ಗುರಿಯಾಗಿದ್ದು ಅವರು ರೂಪಿಸಿದ 'ಸಸ್ಯಾಗ್ರಹ' ಕಾರ್ಯಕ್ರಮದಡಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಸಾವಿರಾರು ಗಿಡಗಳನ್ನು ನೆಟ್ಟು ಬೆಳೆಸಿರುವುದು ಅವರ ಪರಿಸರ ಪ್ರಜ್ಞೆಯ ದ್ಯೋತಕವಾಗಿದೆ. ಇಂದಿಗೂ ಹಸಿರು ಭಾನುವಾರ ಹೆಸರಿನಡಿಯಲ್ಲಿ ಅದಮ್ಯ ಚೇತನ ಪ್ರತಿ ವಾರ ಗಿಡ ನೆಡುವ ಕಾರ್ಯಕ್ರಮವನ್ನು ನಡೆಸುತ್ತಿದೆ. ಅದಮ್ಯ ಚೇತನದ ಅಡುಗೆ ಮನೆಯೂ ಪರಿಸರ ಸಂರಕ್ಷಣೆಗೆ ಒತ್ತು ನೀಡಿದೆ.



**ಆಚಾರ್ಯ ಋಣ:** ಅವರ ನೇತೃತ್ವದಲ್ಲಿ 'ನಿಘಂಟುತಜ್ಞ' ಜಿ.ವೆಂಕಟಸುಬ್ಬಯ್ಯ ಅವರ ಜನ್ಮಶತಮಾನೋತ್ಸವವನ್ನು ಜಯರಾಮ ಸೇವಾ ಮಂಡಳಿ ವೇದಿಕೆಯಲ್ಲಿ ಅಭೂತಪೂರ್ವವಾಗಿ ನಡೆಸಿದ್ದು ಅವರ ಸಾಹಿತ್ಯಪ್ರೇಮಕ್ಕೆ ಸಮಾಜದ ಹಿರಿಯರ ಬಗ್ಗೆ ಅವರಿಗಿದ್ದ ಗೌರವಗಳಿಗೆ ನಿದರ್ಶನವಾಗಿದೆ. ಈ ಸಂಭ್ರಮದಲ್ಲಿ ಶ್ರೀ ಲಾಲ ಕೃಷ್ಣ ಅದ್ವಾನಿಯವರು ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಲು ಅನಂತಕುಮಾರ್ ಅವರ ಪಾತ್ರವಿತ್ತು.

**ಸಾಧನೆಗಳ ಸರಮಾಲೆ:** 2003 ರಲ್ಲಿ ಕೇಂದ್ರ ನಗರಾಭಿವೃದ್ಧಿ ಸಚಿವರಾಗಿದ್ದ ಅನಂತಕುಮಾರ್ ಅವರು ಬೆಂಗಳೂರು ನಗರ ಅಭಿವೃದ್ಧಿಯ ಸಲುವಾಗಿ ಕೇಂದ್ರ ಸರ್ಕಾರದಿಂದ 1000 ಕೋಟಿ ರೂಪಾಯಿಗಳ ವಿಶೇಷ ಸಾಲ ಸೌಲಭ್ಯವನ್ನು ಒದಗಿಸಿದ್ದರು.

ಬೆಂಗಳೂರಿನ ಪ್ರಮುಖ ಮೇಲುಸೇತುವೆಗಳು, ಹೊರವರ್ತುಲ ರಸ್ತೆಗಳು ಮುಂತಾದ ಹಲವಾರು ಭಾರಿ ಯೋಜನೆಗಳ ಬಂಡವಾಳದ ಶೇಕಡ 70ರಷ್ಟು ಮೊತ್ತವನ್ನು ಅನಂತಕುಮಾರ್ ಅವರ ಕಾರ್ಯವ್ಯಾಪ್ತಿಗೆ ಒಳಪಟ್ಟ ಹುಡ್ಕೋ ಸಂಸ್ಥೆ ಒದಗಿಸಿತ್ತು. ಭಾರತದಲ್ಲೇ ಪ್ರಥಮವೆನಿಸಿದ ಕೃಷ್ಣರಾಜಪುರದ ಕೇಬಲ್ ಸೇತುವೆಯ ನಿರ್ಮಾಣದ ಶೇಕಡ 90ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸಲು ಕಾರಣರಾದವರು, ಅನಂತಕುಮಾರ್. ಯಶವಂತಪುರ ರೈಲ್ವೆ ನಿಲ್ದಾಣವನ್ನು ಪ್ರತ್ಯೇಕ ಟರ್ಮಿನಲ್ ನಿಲ್ದಾಣವಾಗಿ ಅಭಿವೃದ್ಧಿಗೊಳಿಸಿ ಸಿಟಿ ನಿಲ್ದಾಣದಲ್ಲಿನ ಒತ್ತಡವನ್ನು ಕಡಿಮೆಗೊಳಿಸುವಲ್ಲಿ ಅವರ ಪಾತ್ರ ಹಿರಿದಾದುದು. ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಕೇಂದ್ರದ ಸಹಯೋಗದೊಂದಿಗೆ 101 ಸುಲಭ್ ಶೌಚಾಲಯಗಳ ನಿರ್ಮಾಣ, ಯಡಿಯೂರು ಕೆರೆ, ಸ್ಯಾಂಕಿ ಕೆರೆ, ಹಲಸೂರು ಕೆರೆಗಳ ಹೂಳುತೆಗೆದು ಸ್ವಚ್ಛಗೊಳಿಸುವುದು, ಜೆಸಿ ರಸ್ತೆಯಲ್ಲಿ ವಾಹನಗಳ ನಿಲುಗಡೆಗೆ ಬಹು ಅಂತಸ್ತಿನ ನಿಲ್ದಾಣ ನಿರ್ಮಾಣ, ಆರ್‌ಟಿ ನಗರ ಮತ್ತು ಮಾಗಡಿ ರಸ್ತೆಯಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ, ಕಲೆ ಮತ್ತು ಸಂಸ್ಕೃತಿಗಳ ಉತ್ತೇಜನಕ್ಕಾಗಿ ಐಜಿಎನ್‌ಸಿಎ ಕೇಂದ್ರದ ಸ್ಥಾಪನೆ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಗ್ರಂಥಾಲಯ ಅಭಿವೃದ್ಧಿ, ಚಾಮರಾಜಪೇಟೆಯಲ್ಲಿ ಮಹಿಳಾ ವ್ಯಾಯಾಮ ಶಾಲೆಯ ಸ್ಥಾಪನೆ, ನ್ಯಾಷನಲ್ ಕಾಲೇಜಿನ ಆಟದ ಮೈದಾನದಲ್ಲಿ ಬೆಳಕಿನ ವ್ಯವಸ್ಥೆ ಮುಂತಾದ ಸಮಾಜಮುಖೀ ಕಾರ್ಯಗಳು ನಗರಕ್ಕೆ ಅನಂತಕುಮಾರ್ ನೀಡಿರುವ ಅನೇಕ ಕೊಡುಗೆಗಳಲ್ಲಿ ಕೆಲವು.

ಅನಂತಕುಮಾರ್ ಇಷ್ಟೆಲ್ಲ ಸಾಧನೆಗಳನ್ನು ಮಾಡಿದ್ದರೂ ತಾವು ನಂಬಿದ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬ ಗೀತೆಯ ಉಕ್ತಿಯಂತೆ ನಿಷ್ಕಾಮ ಸಾರ್ವಜನಿಕ ಜೀವನವನ್ನು ನಡೆಸಿದರು. ◆

# 'ನಮಃ ಶಿವಾಯ' ಸ್ತೋತ್ರ ಸಮರ್ಪಣೆ - ಪ್ರಸಾದ ವಿನಿಯೋಗ









ದಿನಾಂಕ 26/10/2024 ರ ಶನಿವಾರದಂದು ವೇದಾಂತ ಭಾರತಿ ಮತ್ತು ಶಾಂಕರತತ್ವ ಪ್ರಸಾರ ಸಂಸ್ಥೆಗಳ ಸಹಯೋಗದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸಂನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವದ ನಿಮಿತ್ತ, ಪರಮಪೂಜ್ಯ ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ "ನಮಃ ಶಿವಾಯ ಸ್ತೋತ್ರ ಮಹಾಸಮರ್ಪಣೆ" ಕಾರ್ಯಕ್ರಮದಲ್ಲಿ ಅದಮ್ಯ ಚೇತನ ಸಂಸ್ಥೆಯು ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ವ್ಯವಸ್ಥೆಯನ್ನು ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಈ ಸತ್ಕಾರ್ಯದಲ್ಲಿ ಕಾಲೇಜು ವಿದ್ಯಾರ್ಥಿಗಳೂ ಸೇರಿದಂತೆ 150 ಕ್ಕೂ ಹೆಚ್ಚು ಕಾರ್ಯಕರ್ತರು, ಸ್ವಯಂಸೇವಕರಾಗಿ ಬಂದು, ಭೋಜನ ವ್ಯವಸ್ಥೆಯು ಸಮರ್ಪಕವಾಗಿ ನಡೆಯಲು ಕೈಜೋಡಿಸಿ, ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಶ್ರೀಗುರುಗಳ ಅನುಗ್ರಹಕ್ಕೆ ಪಾತ್ರರಾದರು. ಈ ಸತ್ಕಾರ್ಯದಲ್ಲಿ ಅದಮ್ಯ ಚೇತನದ ಅನ್ನಪೂರ್ಣ ಅಡುಗೆ ಮನೆಯಿಂದ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಭಕ್ತರಿಗೆ ಸಿಹಿಯೊಂದಿಗೆ ಬಿಸಿಬೇಳೆಬಾತ್, ಮೊಸರನ್ನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಭೋಜನ ತಯಾರಿಕೆಯ ಕಾರ್ಯದಲ್ಲಿ ಅದಮ್ಯ ಚೇತನದ ಹಲವಾರು ಮಹಿಳಾ ಕಾರ್ಯಕರ್ತರು, ಸಿಬ್ಬಂದಿ ಹಾಗೂ ಯೂತ್ ಫಾರ್ ಸೇವಾ ಸಂಸ್ಥೆಯ ವತಿಯಿಂದ ವಿವಿಧ ಕಾಲೇಜು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗಿಯಾಗಿದ್ದರು. ಪ್ರಸಾದ ವಿನಿಯೋಗಕ್ಕೆ ಅಗತ್ಯವಾದ ಸ್ಟೀಲ್ ತಟ್ಟೆ, ಲೋಟಗಳನ್ನು ನೂರಾರು ದಾನಿಗಳು, ಅದಮ್ಯ ಚೇತನದ ಅಭಿಮಾನಿಗಳು, ಒದಗಿಸಿದ್ದು ಒಂದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಯಡತೊರೆ ಮಠದ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು, ಶ್ರೀ ಬ್ರಹ್ಮಾನಂದ ಮಹಾಸ್ವಾಮಿಗಳು, ಭಾರತದ ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಜಗದೀಪ್ ಧನಕರ್ ಹಾಗೂ ಅವರ ಧರ್ಮಪತ್ನಿ, ಸಂಸದರು, ಸಚಿವರು, ಶಾಸಕರು, ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಮೊದಲಾದವರು ಭಾಗವಹಿಸಿದ್ದರು.

# “ಅನಂತ ಪ್ಲೇಟ್ ಬ್ಯಾಂಕ್” ಉದ್ಘಾಟನೆ:



**ಕುಮಟಾದಲ್ಲಿ “ಅನಂತ ಪ್ಲೇಟ್ ಬ್ಯಾಂಕ್” ಉದ್ಘಾಟನೆ:** ಪರಿಸರ ಸಂರಕ್ಷಣೆಯ ಮಹತ್ವದ ಉದ್ದೇಶದೊಂದಿಗೆ ಅದಮ್ಯ ಚೇತನ ಸಂಸ್ಥೆ ಮತ್ತು ಶ್ರೀ ಜಿ.ಎನ್.ಹೆಗಡೆ ಟ್ರಸ್ಟ್ ಸಹಯೋಗದಲ್ಲಿ ಕುಮಟಾ ತಾಲೂಕಿನ ಗೋರೆಯ ಕೆನರಾ ಎಕ್ಸಲೆನ್ಸ್ ಪಿಯು ಕಾಲೇಜು ಸಭಾಂಗಣದಲ್ಲಿ ದಿನಾಂಕ 22-10-2024 ರಂದು “ಅನಂತ ಪ್ಲೇಟ್ ಬ್ಯಾಂಕ್” ಯೋಜನೆ”ಯನ್ನು ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಅನಂತಕುಮಾರ್ ಪ್ರತಿಷ್ಠಾನ ಪ್ರಕಟಿಸುತ್ತಿರುವ “ಅನಂತಪಥ” ಮಾಸಪತ್ರಿಕೆಯ ಅಕ್ಟೋಬರ್ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪರಿಸರದ ಸಂರಕ್ಷಣೆಗಾಗಿ ಅದಮ್ಯ ಚೇತನ ಸಂಸ್ಥೆಯು ಪ್ಲೇಟ್ ಬ್ಯಾಂಕ್ ವ್ಯವಸ್ಥೆಯನ್ನು ನಡೆಸಿಕೊಂಡು ಬರುತ್ತಿರುವುದನ್ನು ಶ್ಲಾಘಿಸಿದರು. ಸಣ್ಣಸಣ್ಣ ಕಲ್ಪನೆಗಳೂ ಮಹತ್ತರ ಫಲಿತಾಂಶ ತರುವ ಸಾಮರ್ಥ್ಯ ಹೊಂದಿವೆ, ಪರಿಸರವು ವಿನಾಶದತ್ತ ಸಾಗುತ್ತಿರುವ ಈ ಕಾಲದಲ್ಲಿ ಪ್ಲೇಟ್ ಬ್ಯಾಂಕ್ ಯೋಜನೆ ಜನರಿಗೆ ಪ್ರೇರಣೆ ನೀಡುವಂತಿದೆ ಎಂದು ಅವರು ಅಭಿಪ್ರಾಯಪಟ್ಟರು.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿ “ಸರ್ವೇ ಜನಾಃ ಸುಖಿನೋ ಭವಂತು” ಎಂಬ ಭಾರತೀಯ ಚಿಂತನೆಯಂತೆ ಸಮಾಜದ ಸ್ವಾಸ್ಥ್ಯಕ್ಕಾಗಿ, ಆರೋಗ್ಯಕರ ಬದುಕಿಗಾಗಿ ಪರಿಸರವನ್ನು ತ್ಯಾಜ್ಯಮುಕ್ತವಾಗಿಸುವ ಉದ್ದೇಶದಿಂದ ಪ್ರಾರಂಭಿಸಿರುವ ಉಚಿತ ಪ್ಲೇಟ್ ಬ್ಯಾಂಕ್ ಯೋಜನೆಯ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವರೆಂದು ಆಶಿಸಿದರು.

ಶ್ರೀ ಜಿ.ಎನ್ ಹೆಗಡೆ ಟ್ರಸ್ಟ್‌ನ ಅಧ್ಯಕ್ಷ ಡಾ. ಜಿ.ಜಿ. ಹೆಗಡೆಯವರು ಮಾತನಾಡಿ, “ಪ್ಲಾಸ್ಟಿಕ್ ಬಳಕೆ ಇಂದು ಜಗತ್ತನ್ನು ಕಾಡುತ್ತಿರುವ ದೊಡ್ಡ ಸಮಸ್ಯೆಯಾಗಿದ್ದು, ಇದರಿಂದ ಪರಿಸರ ಮತ್ತು ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಮರುಬಳಕೆಯ ವಸ್ತುಗಳನ್ನು ಬಳಸುವ ಕಲ್ಪನೆಯೊಂದಿಗೆ, ಅನಂತ ಪ್ಲೇಟ್ ಬ್ಯಾಂಕ್ ಸ್ಥಾಪನೆಯ ಪ್ರಯತ್ನವನ್ನು ನಾವು ಕೈಗೊಂಡಿದ್ದೇವೆ. ಈ ಯೋಜನೆಯು ಪರಿಸರ ಸಂರಕ್ಷಣೆ ಮತ್ತು ಪರಿಸರಸ್ನೇಹಿ ಬದುಕಿನತ್ತ ಹೆಜ್ಜೆ ಹಾಕಲು ಸಮಾಜಕ್ಕೆ ಪ್ರೇರಣೆಯಾಗಿದೆ” ಎಂದರು.

ಶಾಸಕ ಶ್ರೀ ದಿನಕರ ಶೆಟ್ಟಿಯವರು “ಇದು ವಿಶೇಷ ಮತ್ತು ವೈಶಿಷ್ಟ್ಯಪೂರ್ಣ ಕಲ್ಪನೆ. ನಿಸರ್ಗ ಸಂರಕ್ಷಣೆ ಮಾತ್ರವಲ್ಲದೆ, ಜನಸಾಮಾನ್ಯರಲ್ಲಿ ಪರಿಸರದ ಮಹತ್ವದ ಕುರಿತು ಅರಿವು ಮೂಡಿಸುತ್ತಿರುವ ಅದಮ್ಯ ಚೇತನ ಹಾಗೂ ಜಿ ಎನ್ ಹೆಗಡೆ ಸಂಸ್ಥೆಯ ಕಾರ್ಯ ಶ್ಲಾಘನೀಯ” ಎಂದು ಹೇಳಿದರು.

ವೇದಿಕೆಯಲ್ಲಿ ಪ್ರದೀಪ ಓಕ್, ಲಯನ್ಸ್ ಅಧ್ಯಕ್ಷೆ ಮಂಗಳಾ ನಾಯಕ, ಪ್ರಾಂಶುಪಾಲ ರಾಮ್ ಭಟ್, ಡಿ.ಎನ್ ಭಟ್ಟ, ಡಾ. ಸುರೇಶ ಹೆಗಡೆ, ಪಲ್ಲವಿ ಮಡಿವಾಳ ಮುಂತಾದ ಗಣ್ಯರು ಮತ್ತು ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ತಿಂಗಳ ವರದಿ
### (15 ಅಕ್ಟೋಬರ್ - 15 ನವೆಂಬರ್ 2024)

**ಶಿರಸಿಯಲ್ಲಿ ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆ :** ಶಿರಸಿ ತಾಲೂಕಿನ ಭೈರುಂಬೆಯ ಶ್ರೀ ಶಾರದಾಂಬಾ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಅದಮ್ಯ ಚೇತನದ “ಅನಂತ ಪ್ಲೇಟ್ ಬ್ಯಾಂಕ್” ಮತ್ತು ಶಾಲೆಯ ‘ಖಗೋಳ ವೀಕ್ಷಣಾ ತರಬೇತಿ ಘಟಕ’ದ ಉದ್ಘಾಟನಾ ಕಾರ್ಯಕ್ರಮವು ಭೈರುಂಬೆಯ ಹುಳಗೋಳ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ 22/10/2024ರಂದು ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದಲ್ಲಿ ಸಂಸದರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ಪ್ರದೀಪ್ ಓಕ್, ಶ್ರೀ ಆರ್ ಎಸ್ ಹೆಗಡೆ ಭೈರುಂಬೆ, ಶ್ರೀ ಅನಂತ ಹೆಗಡೆ, ಶ್ರೀ ವಿ. ಎನ್. ಹೆಗಡೆ ಬೊಮ್ನಳ್ಳಿ, ಶ್ರೀ ವಿ. ಎಂ. ಹೆಗಡೆ ಹುಳಗೋಳ, ಶ್ರೀ ವಿಘ್ನೇಶ್ವರ ಹೆಗಡೆ, ಶ್ರೀ ನಾರಾಯಣ ಹೆಗಡೆ, ಶ್ರೀ ವಿಭವ್ ಹಾಗೂ ಇತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪರಿಸರಮಾಲಿನ್ಯ ನಿವಾರಣೆ ಉದ್ದೇಶದಿಂದ ಪ್ರಾರಂಭಿಸಿರುವ ಉಚಿತ ಪ್ಲೇಟ್ ಬ್ಯಾಂಕ್ ಯೋಜನೆಯ ವಿವರಗಳನ್ನು ನೀಡಿ ಈ ಸೌಲಭ್ಯವನ್ನು ಬಳಸಿಕೊಳ್ಳುವಂತೆ ಎಲ್ಲರಿಗೂ ಕರೆ ನೀಡಿದರು.

**463ನೇ ಹಸಿರು ಭಾನುವಾರ :** ಅದಮ್ಯ ಚೇತನದ 463ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು 10/10/ 2024ರಂದು ಚಿಂತಾಮಣಿಯ ಎನ್ ಆರ್ ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿವಿಧ ಜಾತಿಯ 25 ಗಿಡಗಳನ್ನು ನೆಡುವುದರ ಮೂಲಕ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ, ಅದಮ್ಯಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಟ್ರಸ್ಟಿಗಳಾದ ಡಾ. ಶ್ರೀನಾಥ್, ಮಹಿಳಾ ಉದ್ಯಮಿ ಶ್ರೀಮತಿ ಪದ್ಮಾ ಶೇಷಾದ್ರಿ, ಬೆಂಗಳೂರಿನ ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಅದಮ್ಯ ಚೇತನ ಸಿಬ್ಬಂದಿ, ಸ್ವಯಂಸೇವಾ ಕಾರ್ಯಕರ್ತರು, ಪರಿಸರ ಸ್ನೇಹಿಗಳು ಹಾಗೂ ಸ್ಥಳೀಯ ಮುಖಂಡರು ಪಾಲ್ಗೊಂಡಿದ್ದರು.



**ಅನಂತ ಪ್ರೇರಣಾ ಕೇಂದ್ರಕ್ಕೆ ಮಕ್ಕಳ ಭೇಟಿ :** ರಾಷ್ಟ್ರೋತ್ಥಾನ ವಿದ್ಯಾ ಸಂಸ್ಥೆ, ಜ್ಯೋತಿ ಕೇಂದ್ರಿಯ ವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಶ್ರೀ ಅನಂತಕುಮಾರ್ ಅವರ ಕುರಿತ ಚಿತ್ರಪ್ರದರ್ಶಿನಿ ಹಾಗೂ ಕಿರುಚಿತ್ರವನ್ನು ವೀಕ್ಷಿಸಿದರು. ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಪರಿಸರದ ಮೇಲೆ ಉಂಟಾಗುವ ಹಾನಿಯ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲಾಯಿತು. ◆

ಅನಂತಪಥ

Editorial Advisory Committee: Tejaswini Ananthkumar / Gopal T.S / K. Janardhana Thunga
Layout: Ananthakumar Pratishthana Assistance: Sanjay R / Trivikram Joshi / G P Nagarajan
Inputs: Poornaprazna / ACF / AKP / GM Inamdar
Photographs: Gopal TS / Kengeri Chakrapani/ Internet Sources / AKP / ACF
Acknowledgements: Sri Pradeep Oak / Smt. Kamala Krishna Bhat/ Sri Arunkumar
Printed at: Rashtrothana Mudranalaya, Chamarajpet, Bengaluru
Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅನಂತ ಚಿತ್ರಸಂಪುಟ

**ಕನ್ನಡ, ಕರ್ನಾಟಕ ಎರಡೂ ಅನಂತಕುಮಾರ್ ಅವರಿಗೆ ಸದಾ ಆದ್ಯತೆಯ ವಿಷಯಗಳಾಗಿದ್ದುವು. ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವನ್ನು ಅವರು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ.**













## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



'ನಮಃ ಶಿವಾಯ' ಕಾರ್ಯಕ್ರಮದ ನಿಮಿತ್ತ ಬೆಂಗಳೂರಿಗೆ ಆಗಮಿಸಿದ ಭಾರತದ ಉಪರಾಷ್ಟ್ರಪತಿ ಶ್ರೀ ಜಗದೀಪ್ ಧನ್‌ಕರ್ ದಂಪತಿಯನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭೇಟಿಯಾದರು.



'ಅನಂತ ಸ್ಮೃತಿ ನಡಿಗೆ' ಗೆ ಖ್ಯಾತ ಲೇಖಕ ಶ್ರೀ ಬಾಬು ಕೃಷ್ಣಮೂರ್ತಿಯವರು ಚಾಲನೆ ನೀಡಿದರು.



ನಮಃ ಶಿವಾಯ ಸ್ತೋತ್ರ ಮಹಾಸಮರ್ಪಣೆ" ಸಂದರ್ಭದಲ್ಲಿ ಭಕ್ತ ಸಮುದಾಯಕ್ಕೆ ಮಹಾಪ್ರಸಾದ ವಿನಿಯೋಗವನ್ನು ನಿರ್ವಹಿಸಿದ ಶ್ರೀಮತಿ ತೇಜಸ್ವಿನಿ ಅವರನ್ನು ಯಡತೊರೆಯ ಪೂಜ್ಯ ಶ್ರೀ ಶ್ರೀ ಶಂಕರ ಭಾರತೀ ಸ್ವಾಮೀಜಿಯವರು ಅಭಿನಂದಿಸಿ ಆಶೀರ್ವದಿಸಿದರು.



ದಾಸವರೇಣ್ಯ ವಿಜಯದಾಸರನ್ನು ಕುರಿತ ಚಲನಚಿತ್ರದ ಎರಡನೆ ಭಾಗದ ಚಿತ್ರೀಕರಣಕ್ಕೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಕ್ಯಾಮರಾ ಚಾಲನೆ ಮಾಡುವುದರ ಮೂಲಕ ತಂಡಕ್ಕೆ ಶುಭಕೋರಿದರು.



."ಅನಂತಪಥ" ಮಾಸಪತ್ರಿಕೆಯ ಅಕ್ಟೋಬರ್ ಸಂಚಿಕೆಯನ್ನು ಸಂಸದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಬಿಡುಗಡೆ ಮಾಡಿದರು.



ಚಿಂತಾಮಣಿಯ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್ ಆಶ್ರಯದಲ್ಲಿ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನಾಚರಣೆಯ ಸಂದರ್ಭದಲ್ಲಿ ಆರ್ಥಿಕ, ಆರೋಗ್ಯ, ಆವಿಷ್ಕಾರ ಯೋಜನೆಯ ಉದ್ಘಾಟನೆ.



ಅನಂತ ಪ್ರೇರಣಾ ಕೇಂದ್ರಕ್ಕೆ ರಾಷ್ಟ್ರೋತ್ಥಾನ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಭೇಟಿ ನೀಡಿದ ಸಂದರ್ಭ.